


10
ನವರಾತ್ರಿಯ
ಅಕಾಡೆಮಿ, ಮಡಿಕೇರಿ

# ನವರಾತ್ರಿಯ ಕೋಲ್ಮಿಂಚು

## ಬಹುಭಾಷಾ ಕವನ ಸಂಕಲನ

ಗೌರವ ಸಂಪಾದಕರು

ಮೇಕೇರಿರ ಕೆ. ಕಾರ್ಯಪ್ಪ

ಕೆ.ಜಿ. ಹರೀಶ್

**ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ**

ಮಡಿಕೇರಿ ನಗರ ದಸರಾ ಸಮಿತಿ,

ಮಡಿಕೇರಿ

**NAVARATRIYA KOLMINCHU**

A collection of multi language poems, Edited by M.S. Rajendra Kumar, Published by The Karnataka Kodava Sahitya Academy, Madikeri during October, 2000.

ಕ್ರಯ : 10-00

ಪ್ರಕಾಶಕರು :

ರಿಜಿಸ್ಟ್ರಾರ್,
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ,
ಮ್ಯಾನ್ಸ್ ಕಾಂಪೌಂಡ್ ರಸ್ತೆ,
ಮಡಿಕೇರಿ - 571 201
ದೂರವಾಣಿ : 29074

ಮುದ್ರಕರು :

ಪೂಮಾಲೆ ಪ್ರಿಂಟರ್ಸ್,
ವೀರಾಜಪೇಟೆ : 571 218
ದೂರವಾಣಿ : 56360

# ಕೊಡವ ಕವನಗಳು

| ಶೀರ್ಷಿಕೆ | | ಕವಿ |
|---|---|---|
| 1. ಬೋಳುಕ ಮಂಡ | ... | ಪಾಸುರ ರ‍್ಯಾಲಿ ಕಾರ್ಯಪ್ಪ |
| 2. ಕಾವೇರಿ ದರ್ಶನ | ... | ಚೇಂದ್ರಿಮಾಡ ಗ. ಮುತ್ತಪ್ಪ |
| 3. ಫೀ.ಮಾ. ಕೆ.ಎಂ.<br>ಕಾರ್ಯಪ್ಪ ಗೇನತ್ | .... | ವಿ.ಎಸ್. ರಾಮಕೃಷ್ಣ |
| 4. ಪ್ರಕೃತಿ ದೇವಿ | ... | ಕೆ.ಎಂ. ದೇವಕಿ |
| 5. ಪ್ರಶ್ನೆ | ... | ರಾಣಿ ಅಪ್ಪಣ್ಣ |
| 6. ಸಾಧನೆ | ... | ತಾತಂಡ ರಾಣಿ ಗಣೇಶ್ |
| 7. ದಸರಾ ಸಂದೇಶ | ... | ಐನಂಡ ಎಂ. ಧನು |

# ಇತರ ಭಾಷಾ ಕವನಗಳು


| | ಶೀರ್ಷಿಕೆ | | ಕವಿ |
|---|---|---|---|
| 1 | ದ ಟ್ರುತ್ ಶೆಲ್ ನೆವರ್ ಚೇಂಜ್ | ... | ಪಿ.ಕೆ. ಪ್ರಶಾಂತಿ |
| 2 | ನಾಳೈಕಾಗೋ ಕಾತಿರುಕ್ಕೊಂ | ... | ಟಿ. ಎಂ. ಚಂದ್ರಶೇಖರ್ |
| 3 | ಮಾಕೆ ಬಾದ್ | ... | ವಹೀದ್ ಜಾನ್ |
| 4 | ಇದಿಕಲ ನಿಜಂ ಕಾನೆ ಕಾದು | ... | ಸಬಲಂ ಬೋಜಣ್ಣ ರೆಡ್ಡಿ |
| 5 | ಮೃತ್ಯುಂಜಯ | ... | ಡಾ. ಚೇತನ್‌ಕುಮಾರ್ ನಾಯಕ್ |

# ಕನ್ನಡ ಭಾಷಾ ವಿಭಾಗ

# ಸಂಪಾದಕರ ಮಾತು

ಮಿತ್ರರೇ,

ಐತಿಹಾಸಿಕ ನಾಡಹಬ್ಬದ ಅಂಗವಾಗಿ ಮಡಿಕೇರಿ ದಸರಾ ಕವಿಗೋಷ್ಠಿ ಸಮಿತಿ ಸಂಪಾದಿಸಿದ "ನವರಾತ್ರಿಯ ಕೋಲ್ಮಿಂಚು" ಶೀರ್ಷಿಕೆಯ ಕವನ ಸಂಕಲನವನ್ನು ನಿಮ್ಮ ಮುಂದಿಡಲು ಹರ್ಷಿಸುತ್ತೇವೆ. ಇದು ದಸರಾ ಬಹುಭಾಷಾ ಕವಿಗೋಷ್ಠಿಗೆ ಸಂಬಂಧಿಸಿದಂತೆ ಸಮಿತಿ ಹಡೆದ ಎರಡನೇ ಹಾಗೂ ಹೊಸ ಸಹಸ್ರಮಾನದ ಮೊದಲ ಕೃತಿ.

ಕಳೆದ ವರ್ಷ ಕವಿಗೋಷ್ಠಿಯಲ್ಲಿ ವಾಚಿಸಲ್ಪಟ್ಟ ಕವನಗಳು "ಮಂಜಿನೊಳಗಿನ ಮಾತು" ಕೃತಿಯಲ್ಲಿ ಒಡಮೂಡಿದ್ದವು. ಇದೀಗ ಕೊಡಗು ಜಿಲ್ಲೆಯ 33 ಕವಿಗಳ ಕನಸು-ಕನವರಿಕೆಗಳು ಈ ಬಾರಿ 'ನವರಾತ್ರಿಯ ಕೋಲ್ಮಿಂಚಾಗಿ' ಎರಡನೇ ಕೃತಿಗೆ ಇಳಿದಿವೆ.

ಪ್ರತಿವರ್ಷ ನಾಡಹಬ್ಬದ ಸಂಭ್ರಮದಲ್ಲಿ ನಡೆಸಲಾಗುವ ಕವಿಗೋಷ್ಠಿಯಲ್ಲಿ ವಾಚನಗೊಳ್ಳುವ ಕವನಗಳನ್ನು ಮುದ್ರಣ ರೂಪದಲ್ಲಿ ಹಿಡಿದಿಡುವ ನಮ್ಮ ಯತ್ನಕ್ಕೆ 'ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ' ಪ್ರಧಾನ ಆಧಾರ ಸ್ತಂಭ. ಕಳೆದ ಬಾರಿಯಂತೇ ಈ ವರ್ಷವೂ ಸಂಕಲನ ಹೊರತರಲು ಆರ್ಥಿಕ ನೆರವು ಒದಿಗಿಸಿದ ಅಕಾಡೆಮಿ ಅಧ್ಯಕ್ಷ ಶ್ರೀ ಮೇಕೇರಿರ ಕೆ. ಕಾರ್ಯಪ್ಪ, ರಿಜಿಸ್ಟ್ರಾರ್ ಕೆ.ಎ. ಗಣಪತಿ ಹಾಗೂ ಸದಸ್ಯರಿಗೆ ಸಮಿತಿ ಆಭಾರಿಯಾಗಿದೆ.

ಈ ಬಾರಿ ಕವನಗಳಿಗಾಗಿ ಆಹ್ವಾನ ನೀಡಿದಾಗ ಜಿಲ್ಲೆಯ ಹೊರಗಿನಿಂದ ಬಂದ 5 ಕವನಗಳನ್ನು ಹೊರತುಪಡಿಸಿ, ಒಟ್ಟು 86 ಬರಹಗಾರರಿಂದ 8 ಭಾಷೆಯ 138 ಕವನಗಳು ಸಮಿತಿಯ ಕೈ ಸೇರಿದವು. ಈ ಪೈಕಿ ಕನ್ನಡದ 21, ಕೊಡವ ಭಾಷೆಯ 7 ಹಾಗೂ ಇತರ ಭಾಷೆಯ 5 ಹೀಗೆ ಎಂಟು ಜನರಿದ್ದ ಆಯ್ಕೆ ಸಮಿತಿ ಆಯ್ದುಕೊಟ್ಟ 33 ಕವನಗಳು ಇಲ್ಲಿವೆ.

ಸಮಿತಿಯ ಕೈ ಸೇರಿದ ಎಲ್ಲ ಕವನ ಕವಿಗಳಿಗೆ ವೇದಿಕೆ ಒದಗಿಸಿ ಕೊಡುವುದು ದುಸ್ಸಾಧ್ಯವೇ ಸರಿ. ಕವನಗಳ ಒತ್ತಡ, ಸಮಯದ ಅಭಾವ, ಕೃತಿಯ ಗಾತ್ರ... ಇತರ

ಕಾರಣಗಳಿಂದಾಗಿ ಸೀಮಿತ ಸಂಖ್ಯೆಯ ಆಯ್ಕೆಗೆ ಮೊರೆ ಹೋಗಬೇಕಾದ ಅನಿವಾರ್ಯ ಸ್ಥಿತಿ ಸಮಿತಿಯದು.

ಹಾಗೆಂದು, ವಾಚನಕ್ಕೆ ಆಯ್ಕೆಯಾದವು ಮಾತ್ರ ಉತ್ತಮ ಗುಣಮಟ್ಟವಾದವು, ಅವಕಾಶ ನಿರಾಕರಿಸಿದವು ಕಳಪೆ ಮಟ್ಟದ್ದು ಎಂದು ಭಾವಿಸುವ ಅಗತ್ಯವಿಲ್ಲ. ಇತಿಮಿತಿಯ ನೆಲೆಯಲ್ಲಿ ಕಸರತ್ತು ನಡೆಸಬೇಕಾದ ಕಾರಣದಿಂದ, ಗುಣಮಟ್ಟದ ದೃಷ್ಟಿಯಿಂದ ಉತ್ತಮವಾಗಿದ್ದರೂ ಕೆಲವು ಕವನಗಳನ್ನು ಅನಿವಾರ್ಯವಾಗಿ ಕೈಬಿಡಬೇಕಾದ ಸ್ಥಿತಿ ಎದುರಾಯಿತು ಎಂಬುದನ್ನು ನಮ್ರವಾಗಿ ಒಪ್ಪಿಕೊಳ್ಳುತ್ತೇವೆ.

ಕವಿಗೋಷ್ಠಿ ಸಮಿತಿಗೆ ಹರಿದು ಬಂದ ಕವನಗಳ ಸಂಖ್ಯೆಯನ್ನು ಗಮನಿಸಿದರೆ ಸಮಿತಿಯ ಹೆಗಲಿಗೆ ಬಿದ್ದ ಒತ್ತಡದ ಅರಿವು ತಮಗಾಗುತ್ತದೆ ಎಂದು ಭಾವಿಸುತ್ತೇವೆ.

ಆಹ್ವಾನ ಮನ್ನಿಸಿ ಕವನ ಕಳುಹಿಸಿದ ಕವಿಗಳಿಗೆ, ಕವನಗಳ ಆಯ್ಕೆ ಕಸರತ್ತು ನಡೆಸಿದ ಸ್ನೇಹಿತರಿಗೆ, ಸಾಂಪ್ರದಾಯಿಕ ನೆಲೆಯಲ್ಲಿ ದಸರಾ ಸಂಭ್ರಮವನ್ನು ಮುಖಪುಟದಲ್ಲಿ ಕಟ್ಟಿ ಕೊಟ್ಟ ಕಲಾವಿದ ಶ್ರೀ ಬಿ.ಆರ್. ಸತೀಶ್, ಮುದ್ರಣದ ಹೊಣೆ ನಿರ್ವಹಿಸಿದ ವೀರಾಜಪೇಟೆ 'ಪೂಮಾಲೆ ಪ್ರಿಂಟರ್ಸ್'ನ ಶ್ರೀ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ, ಮಡಿಕೇರಿ ನಗರ ದಸರಾ ಸಮಿತಿ ಅಧ್ಯಕ್ಷರಾದ ಶ್ರೀ ಕೆ.ಜಿ. ಹರೀಶ್ ಮತ್ತು ಇತರ ಪದಾಧಿಕಾರಿಗಳು ಹಾಗೂ ನನ್ನೊಂದಿಗೆ ಒತ್ತಾಸೆಯಾಗಿ ನಿಂತ ಸಮಿತಿ ಸದಸ್ಯರು ಹಾಗೂ ಇತರ ಮಿತ್ರರಿಗೆ ನಾನು ಕೃತಜ್ಞ.

ನವ ಸಹಸ್ರಮಾನದ ಈ ಶಿಶುವನ್ನು ಆದರಿಸುತ್ತೀರಿ ಎಂಬ ನಂಬಿಕೆ ನಮ್ಮದು. ಕವನ ಸಂಕಲನದ ಬಗ್ಗೆ ನಿಮ್ಮ ಸಲಹೆ, ಸೂಚನೆ, ಮಾರ್ಗದರ್ಶನಕ್ಕೆ ಸ್ವಾಗತ.

03.10.2000 ಎಂ.ಎಸ್. ರಾಜೇಂದ್ರಕುಮಾರ್

ಮಡಿಕೇರಿ

# ಪರಿವಿಡಿ

## ಕನ್ನಡ ಕವನಗಳು


| | ಶೀರ್ಷಿಕೆ | | ಕವಿ |
|---|---|---|---|
| 1. | ಸಮಸ್ಯೆ | ... | ಲೀಲಾ ಅರುಣ್ |
| 2. | ಗೆಳೆಯನಿಗೊಂದು ನಿವೇದನೆ | ... | ಬಿ.ಆರ್. ಜೋಯಪ್ಪ |
| 3. | ಹುಡುಗಿಯ ಹಕ್ಕಿ ಮಾಡಿ ಕುಕ್ಕುವ ಹದ್ದುಗಳು | ... | ಚಂದ್ರಶೇಖರ ಮಲ್ಲೋರಹಟ್ಟಿ |
| 4. | ಅಖಿಲ | ... | ನಯನಾ ಕಾಶ್ಯಪ್ |
| 5. | ಪುಟ್ಟ ಹುಡುಗಿ ಮತ್ತು ಕನ್ನಡಿ | ... | ಶ.ಗ. ನಯನಾ ತಾರಾ |
| 6. | ಕಥೆ ಹೇಳುವ ಬಂಡೆಗಳ ಮೇಲೆ | ... | ಪಿ.ಎಂ. ಕಾರ್ಯಪ್ಪ |
| 7. | ನನ್ನ ಕನಸುಗಳು | ... | ವೈ.ಎಸ್. ಗೋಪಾಲ್ ರಾವ್ |
| 8. | ವೂಲಿ ಮ್ಯಾಮತ್ | ... | ಗೀತಾ ಭಾವೆ |
| 9. | ಆಲಿಕಲ್ಲಿಗೆ | ... | ಬಾಲಸುಬ್ರಹ್ಮಣ್ಯ ಕಂಜರ್ಪಣೆ |
| 10. | ಬದುಕು ಗೊಂದಲ | ... | ಮಂಜು ಗೋಪಿನಾಥನ್ |
| 11. | ಗೃಹಿಣಿ ಮತ್ತು ಹೊತ್ತು | ... | ಡಾಟಿ ಪೂವಯ್ಯ |
| 12. | ಶರ್ಮಿಷ್ಠೆ | ... | ಜೆ. ಸೋಮಣ್ಣ |
| 13. | ನನಗಿಷ್ಟವಾದುದು | ... | ಪ್ರಮೀಳಾ ಕರುಂಬಯ್ಯ |
| 14. | ನಮಗೆ ಸ್ವಾತಂತ್ರ್ಯ ಸಿಕ್ಕಿದ ದಿನ | ... | ಬಿ.ಎನ್. ರವಿ |
| 15. | ನಿಸರ್ಗದೈಸಿರಿ | ... | ಬಿ.ಎ. ಷಂಶುದ್ದೀನ್ |
| 16. | ಕನಸಿನಾ ಲೋಕದಲಿ | ... | ನಿವೇದಿತಾ ಶೆಟ್ಟಿ |
| 17. | ಶಿಕಾರಿ ಗುಡ್ಡ | ... | ಪ. ಬೇ. ತಮ್ಮಯ್ಯ |
| 18. | ಮನೆ ತಲುಪಬೇಕು ಬಿಡಿ ನನ್ನ | ... | ಕೆ.ಎ. ತಂಗವೇಲು |
| 19. | ಪ್ರಶ್ನೆಗಳು..! | ... | ನಾಗೇಶ್ ಕಾಲೂರ್ |
| 20. | ಕಾರ್ಗಿಲ್ಲಿನ ಮೇಲೆ ಪದ್ಯ ಬರೆಯುವುದಿಲ್ಲ | ... | ಶ್ರೀಧರ ಆರಾಧ್ಯ |
| 21. | ಅವಳೊಂದಿಗೆ | ... | ಬಿ.ಎನ್. ಪುಷ್ಪರಾಜ್ |

# ಸಮಸ್ಯೆ



ಅಂದು...
ಆ ಒಂದು ದಿನ
ಮನಸ್ಸೇಕೋ ತುಂಬಾ ಭಾರವಾಗಿತ್ತು
ಕಾಲಚಕ್ರ ನಿಂತಿದೆ ಅನ್ನೋ
ಭ್ರಮೆ ಮೂಡಿತ್ತು
ಬೆಳಗಾದರೂ ಕತ್ತಲಾದಂತೆ
ತೋರುತಿತ್ತು
ಮನಸ್ಸೆಲ್ಲ ಮಂಜು
ಮುಸುಕಿದಂತನ್ನಿಸಿತ್ತು
ಹೀಗೆ...
ಈ ಪರಿಹಾರ ಕಾಣದ
ಸಮಸ್ಯೆಗಳಂತೆ.
ತಲೆಕೊಡವಿ ಎದ್ದು ಕುಳಿತೆ
ಸಾಧಿಸಲಾಗದ್ದನ್ನು
ಸಾಧಿಸುವೆನೆಂಬ
ಹುಚ್ಚು ಧೈರ್ಯದಲ್ಲಿ
ಆದರೆ...
ಮತ್ತೆ ಮನಸ್ಸೆಲ್ಲ ಮಂಜು
ಮುಸುಕಿದಂತನ್ನಿಸಿತ್ತು
ಬರಿಯ ಆಶ್ವಾಸನೆಗಳಂತೆ
ಈ ಮನಸ್ಸು ಅರಿಯುತ್ತೆ
ಸೂಕ್ಷ್ಮತೆಯನ್ನ
ಕಾಲಚಕ್ರ ಉರುಳೋದನ್ನ

## ನವರಾತ್ರಿಯ ಕೋಲ್ಮಿಂಚು

ರಾತ್ರಿ ಹಗಲಾಗೋದನ್ನ
ಹಗಲು ರಾತ್ರಿಯಾಗೋದನ್ನ
ಆದರೇನು ?
ಸಮಸ್ಯೆಗಳು
ಬೆಳೆಯುತ್ತಲೇ ಇವೆ
ಈಗಿನ ಜನಸಂಖ್ಯೆಯಂತೆ
ನಾನು ಈಗೀಗ
ಹೊಂದಿಕೊಳ್ಳುವುದನ್ನು ಕಲಿತು
ಬೆಳೆಯತೊಡಗಿದ್ದೇನೆ
ಇವೆಲ್ಲದರ ಜೊತೆಜೊತೆಗೆ
ಸಮಸ್ಯೆಯೊಳಗಿನ
ಸಮಸ್ಯೆಯಂತೆ...

ಲೀಲಾ ಅರುಣ್
ಮಡಿಕೇರಿ

# ಗೆಳೆಯನಿಗೊಂದು ನಿವೇದನೆ



ಈ ನೆಲದ ಸಾರ ಸೋರ ಬಿಡಬೇಡ ಗೆಳೆಯ
ರಸ ಹೀರ ಬರುವ ಪರದುಂಬಿಗಳ ಬಿಡಲು ಬ್ಯಾಡ
ಮನೆಯೊಡೆಯ ಪರನಾಗಲು ಬೇಡ
ಹೊತ್ತು ಕೂಳಿನ ತೊತ್ತು ನೀನಾಗಬೇಡ
ಒಂದೊಮ್ಮೆ ನೊಂದು ಬೆಂದ ನಾಡಿದು ಗೆಳೆಯ
ಹೆತ್ತೊಡಲ ಹೊತ್ತೊಡಲ ಮತ್ತೆ ನೋಯಿಸಲು ಬೇಡ
ನೀಡುವ ಕೈಯುಂಟು, ಅದರಲಿ ಸ್ವಾರ್ಥವಡಗುಂಟು ಕೇಳು ಗೆಳೆಯ

ಒಂದು ಒಂದೊಂದಾಗಿ ಹಕ್ಕು ಸುಕ್ಕಾಗಿ
ಇರುವುದೆಲ್ಲಾ ಧಾರೆಯೆರೆಯಬೇಡ
ಹಾಡಿ ಹೊಗಳಿದಾಗ ಎದೆಯುಬ್ಬಿ ನಡೆಯಬೇಡ
ಬೆಳ್ಳಗಿರುವುದೆಲ್ಲಾ ಹಾಲೆಂದು ತಿಳಿಯಬೇಡೆಲವೋ ಮೂಢ..!
ಎಲ್ಲಾ ಗೊಂದಲ ಗೋಜಲು ಗೋಜಲಾಗಿ
ಗ್ರಹಣ ಹಿಡಿದಂತೆಲ್ಲರೂ ಮಂಕಾಗುತ್ತಿಹರು
ಬತ್ತಿ ಸಣ್ಣದಾಗಿ ಎಣ್ಣೆ ಮುಗಿಯುತ್ತಿರಲು
ದೀಪ ಮಂಕಾಗಿ ನಂದಿ ಹೋಗುವ ಮುನ್ನ
ಮುಂದಾಗಿ ಬಾ ಗೆಳೆಯ, ಹೊಸ ಬತ್ತಿ ತಾ... ಎಣ್ಣೆ ತುಂಬಲು ಬಾ...

ಹಳ್ಳಿ ನಗರವಾಗಿ, ಕಾಂಕ್ರೀಟು ಕಾಡಾಗಿ,
ರಕ್ಕಸ ಕಾರ್ಖಾನೆಗಳು ಮಸಣವ ತೋಡುತ್ತಿರಲು
ಕೈ ಬೀಸಿ ಕರೆಯುತ್ತಿವೆ ಬನ್ನಿ, ಮಸಣದಲಿ ಮೌನರಾಗಿರೆಂದು
ಮರೆಯದಿರು ಗೆಳೆಯ
ರೈತನಿಲ್ಲದ ಈ ನಾಡು ಸುಡುಗಾಡು!

ಬಿ. ಆರ್. ಜೋಯಪ್ಪ,
ಮದೆ

# ಹುಡುಗಿಯ ಹಕ್ಕಿಮಾಡಿ ಕುಕ್ಕುವ ಹದ್ದುಗಳು..?



ಗುಳಿಬಿದ್ದ ಕಣ್ಣುಗಳಲ್ಲಿ ಹೆಪ್ಪುಗಟ್ಟಿದ ನೋವು
ಕಡೆದು ಮಜ್ಜಿಗೆ ಮಾಡಲೂ ಆಗದ ಕಪ್ಪಿಟ್ಟ ಕೆನೆ
ಧ್ವನಿ ಹೊರಡಿಸಲಾಗದ ಕೊರಳ ಕರೆಯ ಕೂಗು ಮತ್ತದೇ ಮೌನ
ಚರುಮದ ಸವಿಯುಣ್ಣಲು ಸಾಲಿಟ್ಟು ಬರುವ ರೇಣುಗಳು.

ಹಳ್ಳಿಯ ಹುಡುಗಿ ಅದುರಿ ಗಡಗಡ ನಡುಗುತ್ತ ನಿಂತಳು
ಹೊಟ್ಟೆಗೆ ಹಿಟ್ಟಿಲ್ಲ, ಹಿಟ್ಟು ಬೇಯಿಸಿ ಮಾಡಿದ ರೊಟ್ಟಿಯಿಲ್ಲ
ಚಟ್ಟ ಕಟ್ಟಲಿನ್ನೇನು ತಯಾರಿ ನಡೆಸಿದ ಬಾಡಿಗೆ ಕೈಗಳ
ಎಡಮುರಿಗೆ ಕಟ್ಟಲೂ ಆಗದ ಅಸಹಾಯಕತೆಯ ಪಂಜರ.

ತೂಗುತ್ತಲೇ ಇದೆ ಬಾಳು ಬದುಕಿನ ದಿನಮಾಸದ ತೊಟ್ಟಿಲು
ಮಾಂಸದ ಮುದ್ದೆಯ ಸವರಿ ನೇವರಿಸಿ ಹೋದವರ
ರಕ್ತ ಚಿಮ್ಮುವ ಮುಖದ ಕೆನ್ನೆಗೆ ಅಪ್ಪಿ ಮುತ್ತಿಟ್ಟವರ
ಎದೆ ಬೆದಕಿ ನೋಡಬಂದವರ, ಲೆಕ್ಕ ಇಟ್ಟಿಲ್ಲ ಇಲ್ಲಿ ತನಕ.

ಹಲ್ಲುಬಿಟ್ಟು ಜೊಲ್ಲು ಸುರಿಸುತ್ತ ಬರುವ ಸೀಳುನಾಯಿಗಳು
ಇಲ್ಲಸಲ್ಲದ್ದ ಹೇಳಿ ಕೋಟೆಕೊತ್ತಲ ತೋರಿಸಿ, ತೂರಿಬಿಡುವರು
ಹರಕು ಸೀರೆಯೊಳಗೆ, ಮಮ್ಮಲ ಮರುಗಿ ಮುಲುಗುಟ್ಟುವಳು
ಹದವಾಗಿ ಬೆಳೆದ ಹುಡುಗಿ ಹರಿದ ಕುಪ್ಪಸದೊಳಗೆ.

ಹೊಟ್ಟೆ ಪಾಡು ಯಾರನ್ನೂ ಕೇಳುವುದಿಲ್ಲ, ಏಕೆ ಅನ್ನುವುದಿಲ್ಲ
ಪೊಗರು ತುಂಬಿದ ಊರ ಗೂಳಿಗಳು ಏನೆಂದೂ ವಿಚಾರಿಸುವುದಿಲ್ಲ.
ತೀಟೆ ತೀರಿಸಲು ಬೇಕು ಅಷ್ಟೆ, ತೊಗಲೋ, ತೊಗಟೆಯೋ

## ನವರಾತ್ರಿಯ ಕೋಲ್ಮಿಂಚು

ತೊಂಡೆಹಣ್ಣಿನ ಬಣ್ಣವೋ, ಕಾಗೆಯೋ, ಗೂಬೆಯೋ, ಗೊತ್ತಿಲ್ಲ.

ಹಿಸುಕಿ ಹಿಪ್ಪೆ ಮಾಡಿದರೂ ಹೊಸಕಿ ಹೊರ ಎಸೆದರೂ
ಕ್ಷಣ ಮಾತ್ರದಲಿ ಏನೂ ಆಗಿಲ್ಲವೇನೋ ಎನ್ನುವ ಭಾವ ಹೊತ್ತು
ಹೊಸ ಆಸೆಗಳ ತುಂಬಿಕೊಂಡು ಎದೆಯ ಒಸಗೆಯ ಹಾಸಿಕೊಂಡು
ಕಾಯುವಳು ರಂಗೋಲಿ ಬಿಡಿಸುವ ರಸಿಕರ ಆಗಮನಕ್ಕಾಗಿ.

ಯಾರಿಗೂ ಹೇಳಲಾಗದ ಹಿಂದಿನದೇ ಬದುಕು ಸಾಗಿದೆ ಮುಂದೆ
ಹಿಟ್ಟುಕೊಡದವರು, ಬೆಳೆದುನಿಂತಾಗ ಬೆಳ್ಳಕ್ಕಿ ಬಾನ ಕೊಡುವರು
ಹಳ್ಳಕ್ಕೆ ಬಿದ್ದರೂ ಸಾಯಲು ಬಿಡದೆ ಮೇಲೆತ್ತಿ ಬದುಕಿಸುವರು
ಹರೆಯ ಹಳ್ಳಿಗೂ ಬರುತ್ತದೆ, ನಗರಕ್ಕೂ ಬರುತ್ತದೆ,
ನರಕದ ಕೂಪ ಮಾಡುತ್ತ

ಹುಡುಗಿಯರ ಹಕ್ಕಿ ಮಾಡಿ ಕುಕ್ಕುವ ರಣಹದ್ದುಗಳು
ಎಲ್ಲೆಲ್ಲೂ ಬೀಡುಬಿಟ್ಟು, ಪಾರಹಾಕಿ ಕಾಯುತಿವೆ
ಪೀಡೆಗಳ ಉಡಿಯಲ್ಲಿ ಕಟ್ಟಿಕೊಂಡು ನಡುಗುವ ಸಮಾಜ
ಕಾಯಬಲ್ಲಳೇ,ಕಣ್ಣಿಗೆ ಮರೆಮಾಡಿಕೊಂಡ ಕಾನೂನು ದೇವತೆ...?

**ಚಂದ್ರಶೇಖರ ಮಲ್ಲೋರಹಟ್ಟಿ**
**ಕೊಡ್ಲಿಪೇಟೆ**

# ಅಖಿಲ



ಅಲ್ಲಿ ಹೇಗಿದೆ ಹಗಲು ?
ಕೇಳುವುದೆ ಹೊಚ್ಚ ಹೊಸ ನಸುಕಿನ
ಮೂಡಣದ ಸೊಲ್ಲು ?

ಓಡಿ ಬರುವರೆ ನಿನ್ನ
ಗೆಜ್ಜೆ ಬೆರಳಿನ ಕರೆಗೆ
ಗೌರಕ್ಕ, ದೊಡ್ಡಮ್ಮ, ದೊಡ್ಡ ಅಜ್ಜ ?
ಗೊತ್ತೇನೊ ನಾವೆಲ್ಲ
ಪವಡಿಸಿದ ನಿನ್ನ
ಮೃದುಪಾದ ನೋಡುವ ಬಗೆ !

ಆಗ ! ಗಂಟೆ ಹತ್ತಾಯ್ತು
ಕೆಂಪಿನೆಣ್ಣೆಯ ಹೊತ್ತು
ಬಾಲ್ದಿ ನೀರಿನ ಹದಕೆ
ಭುವಿಗೆ ಭುವಿ ಮುದವಾಗಿ
ಕಾಲಚಕ್ರಕೆ ವೇಗವುಕ್ಕಿ
ಕಂದ ಮರಿಯನು ನೋಡಿ
ನಗೆ ಚೆಲ್ಲಿತು.

ಆಷಾಢ ಮಳೆಯಲ್ಲಿ
ಕೃಷ್ಣ ನಗು ಸುಳಿಯಲ್ಲಿ
ಬೆಚ್ಚನೆಯ ಝುಳಕ
ಮಲ್ಲು ಬಟ್ಟೆಯ ಸುತ್ತು
ಲೋಬಾನ ಪರಿಮಳ
ಮೈಯೆಲ್ಲ ಪುಳಕ

## ನವರಾತ್ರಿಯ ಕೋಲ್ಮಿಂಚು

ಜೋ ಜೋ ಜೋ ಕಂದ
ತೊಟ್ಟಿಲಲಿ ನೀ ಚಂದ
ಕುಳಿತಿಹಳು ಗೌರಕ್ಕ
ನಿನ್ನ ನೆನಪಿನ ಪಕ್ಕ
ಅಖಿಲವನೂ ಕೊಂಡೊಯ್ದು
ನೀ ಬರುವೆ ಮತ್ತೆ
ಕೆನೆಮೋಡ ಬಾನಲ್ಲಿ ತೇಲಿಬರುವಂತೆ
ಕೊಳ್ಳು ಹೂ ಸಂಭ್ರಮವ
ಹೊಸಿಲ ಮುಡಿಗಿಟ್ಟು
ಕಾಯುತಿಹೆ ದಾರಿಗೆ
ಮಂಜು ಮಣಿ ಹಾಸಿ
ನಿಂತು ನಿಂತೇ ನಿನ್ನ ಅಕ್ಕನಂತೆ !

ನಯನಾ ಕಾಶ್ಯಪ್
ಮಡಿಕೇರಿ

# ಪುಟ್ಟ ಹುಡುಗಿ ಮತ್ತು ಕನ್ನಡಿ



ಅದೊಂದು ಬಟ್ಟೆಯಂಗಡಿ
ಸುತ್ತಲೂ ಕನ್ನಡಿ...
ಎತ್ತ ತಿರುಗಿದರೂ ದರ್ಪಣದಿ
ಪ್ರತಿಫಲಿಸುವ ಪ್ರತಿಬಿಂಬ
ಚಂದದ ಫ್ರಾಕು ಕೊಳ್ಳಲೆಂದು
ಬಂದಿದ್ದಳು ಪುಟ್ಟ ಹುಡುಗಿ
ತನ್ನ ಅಪ್ಪನೊಂದಿಗೆ...
ಅಪ್ಪ ನೋಡುತ್ತಿರಲು
ತರತರದ ಫ್ರಾಕುಗಳ
ಪುಟ್ಟ ಹುಡುಗಿ ನಿಂತಿದ್ದಳು
ಕನ್ನಡಿಯ ಮುಂದೆ ಮೈಮರೆತು..!
ತಲೆಯಲ್ಲಿದ್ದ ಹೇರ್‌ಬ್ಯಾಂಡ್ ತೆಗೆದು,
ಸರಿಯಿದ್ದ ಕೂದಲ ಮತ್ತೆ ಸರಿಪಡಿಸಿ,
ಪುನಃ ಹೇರ್‌ಬ್ಯಾಂಡ್ ಸಿಗಿಸಿ,
ಮೊಗವನ್ನೊಮ್ಮೆ ಸವರಿ,
ಆ ಪಕ್ಕ ಈ ಪಕ್ಕಕ್ಕೊಮ್ಮೆ ತಿರುಗಿ
ಮತ್ತೆ ಮತ್ತೆ ನೋಡಿಕೊಂಡಳು
ಹೆಮ್ಮೆಯಿಂದಲಿ ತನ್ನ ಪ್ರತಿಬಿಂಬವ...
ಬಂದದ್ದು ಫ್ರಾಕು ಕೊಳ್ಳಲು
ಮರೆತುಬಿಟ್ಟಳು ಕನ್ನಡಿಯ ಕಂಡಾಗ...
ಪುಟ್ಟ ಹುಡುಗಿಗೂ ಕನ್ನಡಿಯ ಮೋಹ

## ನವರಾತ್ರಿಯ ಕೋಲ್ಮಿಂಚು

ಬಿಟ್ಟೀತೇ...ಇನ್ನು ಹರೆಯದ ಹೆಣ್ಣಾ..?
ದರ್ಪಣವ ಕಂಡಾಗ...
ಸುಪ್ತವಾಗಿಹ ಸೌಂದರ್ಯ ಪ್ರಜ್ಞೆ
ಹೊರಹೊಮ್ಮಿ ಬರುತ್ತಿರಲು,
ಮೈ ಮರೆವುದು ಸಹಜವೆ...
ಏನೆಂದು ಬಣ್ಣಿಸಲಿ ಕನ್ನಡಿಯೆ,
ನಿನ್ನಯ ಮೋಡಿ
ಹೆಣ್ಣುಗಳ ಮೇಲೆ..!

**ಶ. ಗ. ನಯನತಾರಾ**
**ಶನಿವಾರಸಂತೆ**

# ಕಥೆ ಹೇಳುವ ಬಂಡೆಗಳ ಮೇಲೆ

ಮತ್ತೆ ನೆನಪಿಸುತ್ತೇನೆ, ನಾನು ವಿರಹಿ
ಅಷ್ಟಕ್ಕೂ ಉರಿದುಹೋಗಿಲ್ಲ ಹರೆಯದ ರೆಕ್ಕೆಗಳು
ಭಾವನೆಯ ಉರಿಬೆಂಕಿಯಲಿ ಬೆಂದು.
ಅಂದುಕೊಳ್ಳುವುದಲ್ಲ
ಒಂದು ಕಡೆ ಕೂತು ಮೆಲುಕುತ್ತಿದ್ದೆ...!
ಅಂದು, ಪ್ರೀತಿಯ ಕಾಡಿಗೆ ಬರಗಾಲ ಬಂದಾಗ
ಕವಿಯ ಲೇಖನಿಯಲ್ಲೂ ಒಣಗಿತ್ತು ಶಾಯಿ...!
ನನಗೆ ಕಾಣಿಸದ ಕಣ್ಣೊಳಗೆ ಬಸಿದಿತ್ತು ರಕ್ತ
ಕೆದರಿದ ಕೂದಲು, ಒಣಗಿದ ಮೈ
ಕೆಂಪಡರಿಕೊಂಡಂಥ ನಯನಗಳು..!
ನಲಿವಿಲ್ಲ,ಸೊಗಸಿಲ್ಲ, ಎಲ್ಲೆಲ್ಲೂ
ಜೀವನಕೆ ಬೆಲೆಯೆ ಇಲ್ಲವೇನು..?
ಕೇಳುವವರೆ ಇಲ್ಲ, ಅಳಿದುಹೋದವರ
ಕಥೆಗಳ ಹೇಳುವವರೆ ಎಲ್ಲ.
ಕಲ್ಪನೆಯ ಅಗ್ನಿಪರ್ವತ ಸಿಡಿದು
ಹುಟ್ಟಿ ಬಲವಾಗಿತ್ತು ಕಲ್ಲುಬಂಡೆಗಳು
ಬಂಡೆಗಳೇ ಕಥೆ ಹೇಳುತ್ತಿವೆ ಇಲ್ಲಿ
ಒಂದು ಸಲ ಕಿವಿಗೊಟ್ಟು ಕೇಳಿ..!
ಸಾಹಸ ಸಿಂಹ ಮದಕರಿನಾಯಕನ
ಏಳುಸುತ್ತಿನ ಕೋಟೆ, ಮೇಲೆ ಇದೆ ಬತೇರಿ
ಹೈದರಾಲಿಗೆ ಕಲ್ಲುಗಂಬ, ರಾಜಕುವರರಿಗೆ ಉಯ್ಯಾಲೆಗಂಬ
ಅಲ್ಲಿಯೇ ಏಕನಾಥೇಶ್ವರಿ ಹರಸುತ್ತಾಳೆ
ಅಕ್ಕತಂಗಿಯರ ಕೊಳ ಕಣ್ಣೀರಿನಲ್ಲಿ ತುಂಬಿದೆ.

ನಾನು ಹಾರುವ ಹಕ್ಕಿ ಕುಳಿತಿದ್ದೆ
ಓಬವ್ವನ ಕಿಂಡಿಯ ಬಳಿ
ಹುಚ್ಚುಕವಿ ಅಳುತ್ತಿದ್ದಾನೆ ಆಡು ಮೇಯಿಸುತ್ತಾ,
ಕಲ್ಲಿನ ಮೇಲೆ ಆಡುಗಳು
ಸಾಲು ತಪ್ಪಿಸುವುದಿಲ್ಲ, ಚಕ್ಕಳಹೈದಗಳು
ಥೇಟ್ ಭಾರತೀಯ ಸೈನಿಕರಂತೆಯೆ..!
ಕವಿಗೆ ಚಿಗುರುವುದಿಲ್ಲ ಭಾವನೆಗಳು
ಬತ್ತಿಹೋಗಿವೆ ಸ್ಫೂರ್ತಿಯ ಸೆಲೆಗಳು
ಮತ್ತೆ ಹುಡುಕುತ್ತೇನೆ ಕಲ್ಲಿನ ತಳದಲ್ಲಿ
ಪಸೆಯಾದರಿದ್ದಿತೇನು ತಣ್ಣೀರ ಕೊಳದಲ್ಲಿ..!
ಬಂಡೆ ಕಥೆ ಹೇಳುತ್ತಲೆ ಇದೆ
ಕೇಳುವವರ ಕಿವಿಗಳಲ್ಲಿ
ಸ್ವಾರ್ಥಿ ಹಾರುವ ಹಕ್ಕಿ ಅಂದುಕೊಂಡಿತು
ಹಾರಿಹೋಗುವುದೊಳಿತು, ಮಲೆನಾಡ ಗಿರಿಗಳಿಗೆ.

ಕಾರ್ಯಪ್ಪ ಪಿ. ಎಂ.
ಗರ್ವಾಲೆ

# ನನ್ನ ಕನಸುಗಳು



ಓ ತಂಗಾಳಿಯೇ,
ಜೋರಾಗಿ ಬೀಸಬೇಡ
ಹಾರಿ ಹೋದಾವು ನನ್ನ ಕನಸುಗಳು

ನನ್ನ ಕನಸುಗಳು
ಮುತ್ತಿನಾ ಹಿಮಬಿಂದುಗಳಂತೆ
ಹೊತ್ತೇರಿದಂತೆ ಮಂಕಾಗಿ ಕರಗಿ ನೀರಾದಂತೆ
ಹೊಂಗಿರಣಗಳಿಗೆ ಹೆದರಿ
ಎಲ್ಲಿಯೋ ಲೀನವಾಗುವ ಹನಿ ನೀರಿನಂತೆ

ನನ್ನ ಕನಸುಗಳು
ಉಕ್ಕಿ ಹರಿವ ನದಿಯಂತೆ
ಧುಮ್ಮಿಕ್ಕಿ ಹರಿವ ಜಲಧಾರೆಯಂತೆ
ಎಲ್ಲಿಯೋ ಗರ್ಭ ತಳೆದು
ಯಾವುದೋ ಸಾಗರವ ಸೇರುವ ನೀರಿನಂತೆ

ನನ್ನ ಕನಸುಗಳು
ಕಾಮನ ಬಿಲ್ಲಿನಾ ಬಣ್ಣದಂತೆ
ಕ್ಷಣದಲ್ಲೇ ಆಕಾಶದೆತ್ತರ ಏರಿ,
ನೀಲಿ ಬಾನಲಿ ಲೀನವಾದಂತೆ
ನೋವು ನಲಿವಿಗೆ ಕಾರಣವಾಗುವ
ಹುಟ್ಟೇ ಕಾಣದೆ ಮುದುಡಿಹೋದ ಮಧುರ

ಭಾವನೆಗಳಂತೆ

ನನ್ನ ಕನಸುಗಳು
ಬೂದಿಯಲ್ಲಿ ಮುಚ್ಚಿದ ಕೆಂಡಗಳಂತೆ
ಬೂದಿ ಕೊಡವಿದರೆ, ಜೋರಾಗಿ ಗಾಳಿ ಬೀಸಿದರೆ
ಪ್ರಜ್ವಲಿಸುವ ಹೊಂಬಣ್ಣದ ಕೆಂಡದುಂಡೆಗಳಂತೆ
ಕಾಲಗರ್ಭದಲ್ಲಿ ಹೂತು ಹೋಗಿರುವ ಜೀವಗಳಂತೆ

ಓ ತಂಗಾಳಿಯೇ,
ಜೋರಾಗಿ ಬೀಸಬೇಡ
ಹಾರಿ ಹೋದಾವು ನನ್ನ ಕನಸುಗಳು

ವೈ. ಎನ್. ಗೋಪಾಲರಾವ್
ವೀರಾಜಪೇಟೆ

# ವೂಲೀ ಮ್ಯಾಮತ್



ಹತ್ತು ಸಹಸ್ರ ವರ್ಷಗಳೇ ಕಳೆದು ಹೋಗಿವೆ
ನೀ ಕಾಲಗರ್ಭದಲಿ ಸೇರಿಹೋಗಿ.
ಹಿಮ ಪಾತಳಿಯಲಿ ಹೂತುಹೋಗಿ.
ಓ ವೂಲೀ ಮ್ಯಾಮತ್,
ನಿನಗೀಗ ಬಂದಿದೆ ಪುನರುತ್ಥಾನದ ದೆಸೆ.

ಮಂಜಿನಲಿ ಮರಗಟ್ಟಿಹೋದರೂ
ನಿನ್ನ ಮಾಂಸಖಂಡಗಳು
ಕೆಂಪಗಿವೆಯಂತೆ.
ಕ್ರೋಮೋಸೋಮುಗಳು
ಕೋಮಾ ಸ್ಥಿತಿಯಲ್ಲಿದ್ದರೂ
ಜೀನುಗಳಿಗೆ ಜೀವವಿದೆಯಂತೆ.
ಹೊಸಹುಟ್ಟಿಗೆ ಹಗಲಿರುಳು
ಹಾತೊರೆಯುತಿವೆಯಂತೆ.

ಕ್ಲೋನಿಂಗ್ ವಿಧಾನವೊ,
ಲಿಂಗಾಣು ಸಮ್ಮಿಲನವೊ,
ಅಂಗಾಂಶ ಕೃಷಿಯೊ,
ಒಟ್ಟಿನಲಿ ನೀನಾಗಲಿದ್ದೀ ಅವತಾರಿ ಪ್ರಾಣಿ.
ಹುಟ್ಟಿಸಹೊರಟಿದ್ದಾರೆ, ನಿನ್ನ ಮತ್ತೊಮ್ಮೆ
ಸೃಷ್ಟಿಕರ್ತ ಬ್ರಹ್ಮನ ಪುಳ್ಳಿಗಳು,
ನಮ್ಮ ಜೀವ ವಿಜ್ಞಾನಿಗಳು.

ನಿನ್ನ ಆಗಮನದಿಂದ
ಜೀವಮಂಡಲದಲೊಂದು ಹೊಸ ಅಲೆ,
ಪ್ರಕೃತಿ ಪ್ರೇಮಿಗಳಿಗೆ ನಿರುಮ್ಮಳ

ದಂತ ಚೋರರಿಗೆ ಮಹದಾನಂದ.
ನನ್ನಂಥ ಕೋಟಿ ಕೋಟಿ ಕುರುಡರಿಗೆ
ಸ್ಫುರಿಸುತ್ತದೆ ಹೊಸದೊಂದು ವ್ಯಾಖ್ಯೆ
"ಆನೆ ಎಂದರೆ ಉದ್ದುದ್ದ ಕೂದಲ ಗೊಂಚಲು"

ಕುರುಡರಾದರೂ ಕೂಡ
ಹಲವು ನಾಯಕರ ಕೊಂದವರು ನಾವು
ಅವರ ಆದರ್ಶಗಳ ಹೂತವರು ನಾವು
ಅದರಲಿ ಬಲು ನುರಿತವರು ನಾವು

ನೀನಿಂತು ಹುಟ್ಟುವ ಬಗೆಗೆ
ತಿಳಿದಿದ್ದರೆ ಮೊದಲೇ ನಮಗೆ
ಗಾಂಧೀಜಿಯ ಗುಂಡಿಗೆಗೆ
ಗುಂಡು ಹೊಡೆಯುವ ಬದಲು
ಮಂಜಿನಲಿ ಅವರನ್ನೇ
ಹೂತು ಬಿಡಬಹುದಿತ್ತು.

ಪರ್ವಕಾಲದಲಿ ಹೊರತೆಗೆದು
ಮತ್ತೊಮ್ಮೆ ಹುಟ್ಟಿಸಿ
ರಾಮರಾಜ್ಯದ ಕನಸ
ಕಾಣಬಹುದಿತ್ತು.

**ಗೀತಾಭಾವೆ, ಮಡಿಕೇರಿ**

*(ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆ ನಶಿಸಿಹೋದ ಪ್ರಾಣಿ. ಇಂದಿನ ಆನೆಯನ್ನು ಹೋಲುತ್ತಿದ್ದ ಈ ಪ್ರಾಣಿಯ ವೈಜ್ಞಾನಿಕ ಹೆಸರು "ಎಲಿಫಸ್ ಪ್ರೈಮಿಜೀನಿಯಸ್" ಇದೀಗ ಜೀವ ವಿಜ್ಞಾನಿಗಳು ಇವನ್ನು ಪುನಃ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ.)*

# ಆಲಿಕಲ್ಲಿಗೆ



ಆಲಿಕಲ್ಲೆ,
ಮೋಡ ನಾಚಿ ನನ್ನ ನಿರೀಕ್ಷೆಗೆ ಸೋತಾಗ
ನೀನಿದ್ದೆ ಮಳೆಯೊಳಗೆ
ಮಳೆಯಿತ್ತೆ ನಿನ್ನೊಳಗೆ ?

ಈ ನನ್ನ ನೆಲದ ಬದುಕಿಗೆ ನೀನು ಬಿದ್ದೆ
ನನ್ನನ್ನೆ ಗೆದ್ದೆ
ಮಣ್ಣಿಗೆ ಪರಿಮಳ ನೀಡುತ್ತ
ನೀನಲ್ಲೆ ಕರಗಿದೆ
ನಿನ್ನ ಕಳಕೊಂಡಂತೆ ನಾನು ಕೊರಗಿದೆ

ಮಳೆ ಬಂದಾಗೆಲ್ಲ
ನಿನ್ನ ನೆನಪಿಸುತ್ತ ಹುಡುಕುತ್ತ
ಆಯ್ದುಕೊಳ್ಳುತ್ತೇನೆ ನಿನ್ನ ಗತ
ವೈಭವವನ್ನು !

ಎಲ್ಲೆಡೆ ನೀನೇ ನೀರಾದ
ಗುಳ್ಳೆ ಘಳಿಗೆಗಳಿಗೆ
ಬಂದೀತು ಒಂದು
ಸ್ಫಟಿಕ ಕ್ಷಣ !

ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಮಡಿಕೇರಿ

# ಬದುಕು-ಗೊಂದಲ



ಬದುಕಬೇಕೆಂಬ
ಬಯಕೆ ಮನದಲ್ಲಿದೆ
ಬದುಕುವುದಾದರೂ ಹೇಗೆ...?

ಬದುಕಲಿಕ್ಕೆ ಬೇಕು
ಬದುಕುವ ಮಾತು
ಬದುಕುವ ಮಾತಾದರೂ ಏನು..?

ಈಸಬೇಕು, ಇದ್ದು ಜಯಿಸಬೇಕು
ಬರಡು ಬಾಳಿನಲ್ಲಿ ಈಜುವುದಾದರೂ ಎಲ್ಲಿ..?
ಸೋಲುಗಳೆ ತುಂಬಿರುವಾಗ
ಜಯಿಸುವುದಾದರೂ ಎಲ್ಲಿಂದ...?

ನಮ್ಮ ಮನೆಯಲ್ಲಿ
ಸ್ಯಾಟ್‌ಲೈಟ್‌ನಿಂದ
ವೆಬ್‌ಸೈಟ್‌ನವರೆಗೂ ಬಂದಿದ್ದರೂ
ತೊಲಗಲಿಲ್ಲ ಜಾತಿ ಮತಗಳ ಅಂತರ..!

ನಮ್ಮ ನೆರೆಮನೆಯವರು
ಚಂದಿರನ ನೆಲದಿಂದ
ಅಂಗಾರನ ಅಂಗಳದವರೆಗ್ಹೋದರೂ
ಸಿಗಲಿಲ್ಲ ಪ್ರತಿಭೆಗಳಿಗೊಂದಿಷ್ಟು ಪ್ರತಿಫಲ..!
ಆದರ್ಶಗಳ ನಂಬಿ ನಡೆದವನಿಗೆ
ಒಂದ್ಹೊತ್ತಿನ ಕೂಳಿಗೂ ಗತಿಯಿಲ್ಲ
ಅಡ್ಡದಾರಿಯ ಶಕುನಿಗಳಿಗೆ
ಎಲ್ಲೆಲ್ಲೂ ರಾಜಯೋಗ...!

## ನವರಾತ್ರಿಯ ಕೋಲ್ಮಿಂಚು

ತ್ಯಾಗದಿಂದ ಗಳಿಸಿದ ಸ್ವಾತಂತ್ರ್ಯಕ್ಕೆಲ್ಲಿದೆ ಗೌರವ..?
ಮಣ್ಣಿನ ಮಕ್ಕಳಿಗೆ ಕೀಟನಾಶಕವೇ
ಮುಕ್ತಿಯ ದಾರಿ
ಅರ್ಧ ಶತಮಾನ ಕಳೆದರೂ
ಸಂಕೋಲೆಯಲ್ಲಿರುವ ಭಾರತ ನಾರಿ..!

ಹೀಗೆ...ಹಾಗೆ...ನೂರಾರು ಗೊಂದಲಗಳ
ಗೂಡು, ನಮ್ಮ ಸಾಮಾಜಿಕ ಬದುಕು..!

ಜ್ಞಾನದಲ್ಲಿ ಏನೇನೋ ಸಾಧಿಸಿದರೂ...
ಹೊಟ್ಟೆಗೊಂದಿಷ್ಟು ಹಿಟ್ಟು, ಮೈ ಮುಚ್ಚುವ ಬಟ್ಟೆ,
ಮನದಲ್ಲಿ ಒಂದಿಷ್ಟು ಪ್ರಶಾಂತ
ನೆಮ್ಮದಿ, ಇಲ್ಲದ ಮೇಲೆ
ಬದುಕುವುದಾದರೂ...ಹೇಗೆ...?

ಮಂಗೋಣ್,
ಹೊದ್ದೂರು

# ಗೃಹಿಣಿ ಮತ್ತು ಹೊತ್ತು



ನಾನು ಗೃಹಿಣಿ
ನನ್ನ ರವಿಯನ್ನು ನಾನು
ಪ್ರೀತಿಸುತ್ತೇನೆ...!
ಬಯಸುತ್ತೇನೆ...!
ಆರಾಧಿಸುತ್ತೇನೆ...!

ಎಲ್ಲಕ್ಕೂ ಮಿಗಿಲಾಗಿ
ಹೊತ್ತು ಹೊತ್ತಿಗೆ ನಾನವನನ್ನು
ಶಪಿಸುತ್ತಿರುತ್ತೇನೆ
ಏಕೆ...ಹೀಗೇಕೆ
ಹೇಳಬೇಕೆ...?

ನಾನು ಕೇಳಿದ್ದೇನೆ
ಆದರೆ ನೋಡಿಲ್ಲ !

ಮುಂಜಾವಿನ ಹೊತ್ತು
ಹುಲ್ಲುಹಾಸಿನ ಮೇಲೆ
ಮಂಜು ಮುತ್ತಿನ ಹನಿಗಳು
ಹೊಳೆಯುತ್ತಿರುತ್ತವೆಯಂತೆ...!

ಜೇಡನ ಬಲೆಯ ವರ್ತುಲದಲ್ಲಿ
ಮಂಜು ಹನಿಯ ಮಾಲೆಗಳು
ಜೋತಾಡುವುದು ಕಣ್ಣಿಗೆ ಹಬ್ಬವಂತೆ
ಅರಳಿದ ಹೂವಿನ ಪಕಳೆಗಳಲ್ಲಿ
ಮಂಜು ಮಣಿಗಳು...
ವರ್ಣ ವಿಭಜನೆಯಿಂದ
ಕಂಗೊಳಿಸುವುದಂತೆ...!

## ನವರಾತ್ರಿಯ ಕೋಲ್ಮಿಂಚು

ಆದರೆ ನಾ ಗೃಹಿಣಿ
ಬೆಳಗಿನ ಗೃಹಕರ್ಮಗಳ ಮುಗಿಸಿ
ಹೊರಗಿಣುಕಿದಾಗ...
ನೆತ್ತಿಯ ಮೇಲೇರಿರುವ ರವಿ
ಮಂಜು ಹನಿಗಳನ್ನೆಲ್ಲ ಚಪ್ಪರಿಸಿ
ತುಂಟ ನಗು ನಗುತ್ತಾನೆ
ತನ್ನ ಹೊತ್ತಿನ ಶಾಖದಿಂದ
ನನ್ನ ಮನಸ್ಸನ್ನು ಸುಡುತ್ತಾನೆ
ಆಗ ನಾನವನನ್ನು ಶಪಿಸುತ್ತೇನೆ

ನಾನು ಕೇಳಿದ್ದೇನೆ...
ಗೃಹಿಣಿಗೂ ಗೆಳತಿಯರಿರುವರಂತೆ
ಗೆಳತಿಯರೊಂದಿಗೆ ಹರಟೆ ಮುದವಂತೆ
ಆದರೆ ನಾ... ಹರಟ ಹೊರಟಾಗ
ಕಾಯಿ ತುರಿಯುವ ಅಮ್ಮನ
ಕಂಗಳನ್ನು ನೋಡುತ್ತಾ ನಗುವ
ತುಂಟ ಕಂದಮ್ಮ...
ಮೆಲ್ಲಗೆ ಕಾಯಿ ತುರಿಯನ್ನು ಕದ್ದು
ಮರೆಯಾಗುವಂತೆ...
ನನ್ನ ರವಿ ನಸುನಗುತ್ತಾ...
ಪಡುವಣದಲ್ಲಿ ಜಾರಿಬಿಡುತ್ತಾನೆ
ಆಗ ನಾನವನನ್ನು ಶಪಿಸುತ್ತೇನೆ !

ಸಿಟ್ಟಿನಿಂದ ಕೊನೆಗೊಮ್ಮೆ
ರವಿಯನ್ನು ಧಿಕ್ಕರಿಸಿ
ರವಿಯಿಲ್ಲದ ಕತ್ತಲಿನಲ್ಲಿ
ಅವನ ಹೊತ್ತಿನ ಹಂಗಿಲ್ಲದೆ
ಸುಖವನರಸ ಹೊರಟೆ...!

# ನವರಾತ್ರಿಯ ಕೋಲ್ಮಿಂಚು

ಕತ್ತಲಲ್ಲಿ...ನನ್ನಿನಿಯನ...
ಬಾಹು ಬಂಧನದಲ್ಲಿ !

ಗೃಹಕರ್ಮ ಮುಗಿಸಿದೆ
ಲೋಕ ನಿದ್ರಿಸುತ್ತಿತ್ತು
ನಾ... ನಡೆದೆ ಇನಿಯನೆಡೆಗೆ
ನಡೆವ ದಾರಿಯಲಿ
ಮೂರ್ಖರ ಪೆಟ್ಟಿಗೆ
ಗಹಗಹಿಸಿ ಕರೆದಿತು
ಓ ಗೃಹಿಣಿಯೇ
ಹೊರ ಪ್ರಪಂಚದರಿವು
ಬೇಡವೇ ನಿನಗೆ...?

ಇಂಡೋ - ಪಾಕ್
ಕ್ರಿಕೆಟ್ ನಡೆಯುತ್ತಿದೆ
ನಾ ಕುಳಿತೆ ಪೆಟ್ಟಿಗೆಯ ಮುಂದೆ...!

ಪಂದ್ಯ ಮುಗಿದಾಗ ಅದೆಷ್ಟು ಹೊತ್ತೋ...
ನಾ ನಡೆದೆ ಇನಿಯನ ಬಳಿಗೆ
ಕರಗಿ ಹೋಗಲು ಕಂಬಳಿಯ ಒಳಗೆ.

ಇದ್ದಕ್ಕಿದ್ದಂತೆ...
ಕೊಟ್ಟಿಗೆಯ ಹುಂಜ ಕೂಗಿತ್ತು
ನನ್ನ ಇನಿಯನನ್ನು ಬಡಿದೆಬ್ಬಿಸಿತ್ತು

ಆ ಕೂಗು ನನಗೆ
ಬಡ ಗೃಹಿಣಿಯ
ಆರ್ತನಾದದಂತೆ ಕೇಳಿಸಿತ್ತು.

## ನವರಾತ್ರಿಯ ಕೋಲ್ಮಿಂಚು

ಕಿಟಕಿಯಿಂದ ಹೊರಗಿಣುಕಿದೆ
ಮೂಡಣದಲ್ಲಿ ಮೇಲೆದ್ದ ನನ್ನ ರವಿ
ತುಂಟ ನಗು ನಗುತಿದ್ದ

ಧೀಮಂತನಾಗಿ ಆತನ
ಕರ್ತವ್ಯದ ಕರೆಗೆ ಓಗೊಟ್ಟಿದ್ದ

ನನ್ನ ತಲೆ ಬಿಸಿಯೇರಿತು
ಮೈ ಬೆಚ್ಚಗಾಯಿತು
ಚಳಿ ಜ್ವರ, ಜ್ವರ ಚಳಿ
ನಾನೋಡಿದೆ ಹೊರಗೆ
ಬಿಸಿಲಿಗೆ ಮೈಯೊಡ್ಡಿದೆ
ನನ್ನ ರವಿಯನ್ನು ಬಿಟ್ಟಿರಲಾರದೆ

**ಉಳ್ಳಿಯಡ ಡಾಟಿ ಪೂವಯ್ಯ**
**ಮಡಿಕೇರಿ**

# ಶರ್ಮಿಷ್ಠೆ



ಅಸುರರ ಮನೆಯಲ್ಲಿ
ಶಶಿ ಉದಿಸಿ ಬಂದಂತೆ
ಹಾಲ್ಗಡಲ ನೊರೆಚೆಲ್ಲಿ
ಹೊಳೆವ ಮುತ್ತು

ಹೆತ್ತೊಡಲ ಮಡಿಲಲ್ಲಿ
ಹಸುಳೆ ಪಚ್ಚೆಯ ಪೈರು
ವಾತ್ಸಲ್ಯದಮಲಿನಲಿ
ಕುಡಿ ಒಡೆಯುತ್ತಿತ್ತು

ನೀಲಿಕಣ್ಗಳ ಚೆಲುವು
ಆಕಾಶಕ್ಕೆಣೆಯಾಗಿ
ಪಲ್ಲಕ್ಕಿಯಲಿ ಮೆರೆವ
ಕನಸು ಭಗ್ನ

ಶುಕ್ರಾಚಾರ್ಯರ ಮಗಳ
ದೈತ್ಯತನ ಹೆಡೆ ಎತ್ತಿ
ಹರಕು ಚಿಂದಿಯ ಉಟ್ಟು
ದಾಸಿಯಾದೆ

ರಕ್ಕಸ ಕನ್ನೆಯರ
ಮೈವೆತ್ತ ಮನುಷ್ಯತ್ವ
ಯಮಭಯಂಕರರಿಗೆ
ಸಿಂಹಸ್ವಪ್ನ

## ನವರಾತ್ರಿಯ ಕೋಲ್ಮಿಂಚು

ಇತಿಹಾಸ ಪುಟಗಳಲಿ
ಸಹಸ್ರಾರು ಹೆಣ್ಣುಗಳ
ಬಟ್ಟಲು ಕಣ್ಣಿನ ಒಳಗೆ
ಅಶ್ರುಧಾರೆ

ನಿನ್ನ ಅಮರ ಪ್ರೇಮ
ಅಮೃತಧಾರೆಗೆ ಸಮ
ಮುಳ್ಳುಗಂಟಿಗಳಲ್ಲೂ ಇದೆ
ತಂಪನುಣಿಸುವ ಕಂಪು
ಎಂಬ ನೀತಿಯ ವಾಕ್ಯ
ಮನ ತುಂಬಿದೆ

ಪುರಾಣಪುಟಗಳಲ್ಲಿ
ನತದೃಷ್ಟ ಹೆಣ್ಣಾದೆ
ಹೃದಯವಿದ್ದವರು
ಕರಗುವರು ಕೊರಗುವರು
ನಿನ್ನ ಭಗ್ನ ಪ್ರೇಮದ
ಬದುಕು ಕಂಡು

**ಜಿ. ಸೋಮಣ್ಣ**
**ಬಾಳಿಲೆ**

# ನನಗಿಷ್ಟವಾದುದು



ಭಾವನೆಗಳ ಹಿಡಿದಿಟ್ಟು
ಕನಸುಗಳ ಕಟ್ಟುತ
ಬಾಳು ಸವೆಸುವುದು
ನನಗಿಷ್ಟ...
ಕಷ್ಟಗಳಲ್ಲಿ ನಗುವ
ಚುಚ್ಚುಮಾತಿನ ನೋವ
ಭಾವನೆಗಳಲ್ಲಿ ಹಿಡಿದಿಡುವುದು
ನನಗಿಷ್ಟ...
ಒದ್ದಾಡಿ ಒದ್ದಾಡಿ
ಕುಸಿಯುತಿಹ ಹೃದಯಕೆ
ತಂತುರು ನೀರಹನಿ ಲೇಪನ
ನನಗಿಷ್ಟ...
ಮಾಮರದ ಚಿಗುರು
ಕೋಗಿಲೆಯ ಇಂಚರ
ಇಂಥ ಜೀವದಾ ಸೆಲೆ
ನನಗಿಷ್ಟ...
ಹೂವಿನಾ ಕಂಪು
ಪಾತರಗಿತ್ತಿಯ ರಂಗು
ಬದುಕಿನಾ ಸ್ಫೂರ್ತಿ
ನನಗಿಷ್ಟ...
ಕಷ್ಟದಾ ದಿನಗಳಲಿ
ಸುಖವ ಕಾಣಲು
ಹಣತೆಯಾ ಬೆಳಗುವುದು
ನನಗಿಷ್ಟ...!

ಎ. ಪ್ರಮೀಳ ಕರುಂಬಯ್ಯ
ಮಡಿಕೇರಿ

# ನಮಗೆ ಸ್ವಾತಂತ್ರ್ಯ ಸಿಕ್ಕಿದ ದಿನ...



"ನಿಮಗೆ ಸ್ವಾತಂತ್ರ್ಯ ಸಿಕ್ಕಿದೆ" ಎಂದು
ಜಾಹೀರಾತು ಕೊಡಲು ಬಂದ
ನೆಹರೂಗೆ ಕಂಡಿದ್ದು,
ಸೂಟು - ಬೂಟು ಇಲ್ಲದೆ
ಗಾಂಧೀಜಿ ಕಾಣೆಯಾಗಿದ್ದು
ಬ್ರಿಟಿಷರ ಕೋಟಿನೊಳಗಿಂದ
ಪೀಟರ್ ಸ್ಕಾಚ್ ವಿಸ್ಕಿಯನ್ನು
ಭಾರತೀಯರು ಕದ್ದದ್ದು
ಪಾಕಿಸ್ತಾನದ ಮುಲ್ಲಾಗಳು
ಬಟ್ಟೆಗೆ ಅತ್ತರು ಮೆತ್ತಿಕೊಂಡದ್ದು.

ನಟ್ಟ ನಡುರಾತ್ರಿಯಲ್ಲಿ
ಗಾಂಧೀಜಿಯನ್ನು ಹುಡುಕಲು
ಕಣ್ಣಿಗೆ ಕೂಲಿಂಗ್ ಗ್ಲಾಸ್ ಇಟ್ಟ ಜನ...
ಮಸೀದಿಯಲ್ಲಿ ನಮಾಜ್ ಮಾಡಲಿಲ್ಲ
ದೇವಾಲಯಗಳಿಲ್ಲಿ ಹಣತೆ ಹಚ್ಚಲಿಲ್ಲ
ಚರ್ಚುಗಳಲ್ಲಿ ಕ್ಯಾಂಡಲ್ ಉರಿಸಲಿಲ್ಲ
ಕಟ್ಟಕಡೆಗೆ, ಮದ್ಯ ತುಂಬಿದ್ದ ಗ್ಲಾಸುಗಳನ್ನು ಹಿಡಿದು
ಫೈವ್ ಸ್ಟಾರ್ ಹೋಟೆಲುಗಳಲ್ಲಿ
ಬಾರ್ ಕ್ಯಾಬರೆ ಕ್ಲಬ್ಬುಗಳಲ್ಲಿ
ಝಗಝಗಿಸುವ ವಿದ್ಯುತ್‌ದೀಪ ಉರಿಸಿದರು

ನಮಗೆ ಸ್ವಾತಂತ್ರ್ಯ ಸಿಕ್ಕಿದ ದಿನ...
ಗಾಂಧೀಜಿ, ಕಲ್ಕತ್ತಾದ ಕೊಳಗೇರಿ ಜನರ ಬಟ್ಟೆ
ಒಗೆಯುತ್ತಿದ್ದರು

## ನವರಾತ್ರಿಯ ಕೋಲ್ಮಿಂಚು

ಬಾಡಿದ ಮುಖಗಳಿಗೆ ಪೌಡರ್ ಹಚ್ಚುತ್ತಿದ್ದರು
ಕತ್ತಲೆ ತುಂಬಿದ ಮನೆಗಳಲ್ಲಿ
ಕ್ಯಾಂಡಲ್ ಉರಿಸುತ್ತಿದ್ದರು

ಬನ್ನಿ...
ನಿಮಗೆ ಸ್ವಾತಂತ್ರ್ಯದ ಕನಸು ಕೊಡುತ್ತೇನೆ...
ಹೊಟ್ಟೆ ತುಂಬಲು ನೆಮ್ಮದಿ ಕೊಡುತ್ತೇನೆ
ಮಾನ ಮುಚ್ಚಲು ಮರ್ಯಾದೆ ಕೊಡುತ್ತೇನೆ
ಎಂದ ಗಾಂಧೀಜಿ...
ರಾಮರಾಜ್ಯದಲ್ಲಿ ತುಪಾಕಿ ಹಿಡಿದ
ಸಿಪಾಯಿ ಆದರು
ಶವದಂತೆ ಮಲಗಿದ ನಮ್ಮ ರಸ್ತೆಯಲ್ಲಿ
ಶವದ ಕಪ್ಪು ಹೊದಿಕೆಯಾದರು
ಜಿಗಣೆಗಳ ದಾಹಕ್ಕೆ ಸೋತು
ತುಂಡು ಪಂಚೆಯೊಳಗೆ
ಅಸ್ಥಿಪಂಜರವಾದರು.

ಇಂದು, ಮೀಸೆ ತಿರುಗಿಸುವ ಜನ
ಗಾಂಧೀಜಿಯ ಬುರುಡೆ ಸವರುತ್ತಿದ್ದಾರೆ
ಹೊಟ್ಟೆ ತಿಕ್ಕಿಕೊಳ್ಳುವ ಜನ
ಪ್ರತಿಮೆಗೆ ಹೂವಿನ ಹಾರ ಹಾಕುತ್ತಿದ್ದಾರೆ
ಎಲ್ಲರಿಗೂ ಇವರೊಬ್ಬ
ಹುಚ್ಚ ಸಮಾಜ ಸುಧಾರಕ..!
ನಮ್ಮೆಲ್ಲರ ಹಂಬಾಕಿನ ಬುಲೆಟ್‌ಗೆ
ಎದೆಯೊಡ್ಡಿ "ಹೇ...ರಾಮ್" ಎಂದ ದಿನ
ನಮಗೆ ಸ್ವಾತಂತ್ರ್ಯ ಸಿಕ್ಕಿತು (?!)

ರವಿ ಬಿ. ಎನ್.
ಮೂರ್ನಾಡು

# ನಿಸರ್ಗದೈಸಿರಿ



ಕನ್ನಡ ನಾಡಿನ ಹೆಮ್ಮೆಯ ಬೀಡು
ಕೊಡಗಿದು ದಕ್ಷಿಣ ಕಾಶ್ಮೀರ
ತುಂಬಿಹುದಿಲ್ಲಿ ನಿಸರ್ಗದೈಸಿರಿ
ಮಣಿಯದ ನಿಲುಹಿನ ಗಿರಿಶಿಖರ

ಉನ್ನತ ಬೆಟ್ಟದ ಶೃಂಗದ ಮೇಲೆ
ಲಾಸ್ಯವನಾಡುವ ಮೋಡಗಳು
ನೆಲವನು ಚುಂಬಿಸಿ ಬಿಸಿಲಿಗೆ ಕರಗುವ
ಮಂಜಿನ ಲಜ್ಜೆಯ ಆಟಗಳು

ನಿಸರ್ಗ ದೇಗುಲವೀ ನಾಡು
ಶಾಂತಿ ನೆಮ್ಮದಿಯ ನೆಲೆವೀಡು||

ಕಾಡಿನ ಹಸುರಿನ ಹಿನ್ನೆಲೆಯಲ್ಲಿ
ನಲಿಯುತ್ತಿವೆ ಹುಲಿ ಹುಲ್ಲೆಗಳು
ಕಾನನದರಸರ ತರದಲಿ ವನದಲಿ
ಅಲೆಯುತಿವೆ ಕಾಡಾನೆಗಳು

ವನಜೀವಿಗಳ ಈ ಸಂಕುಲವು
ನಿಜಕೂ ಕೊಡಗಿಗೆ ಸಂಪದವು||

ನಾಡಿನ ರೈತರ ಭಾಗ್ಯದ ಬಾಗಿಲು
ನದಿ ಕಾವೇರಿಯು ಹರಿದಿಹಳು
ತವರಿನ ನಿರ್ಮಲ ಪರಿಸರದಲ್ಲಿ
ನೆಮ್ಮದಿ ತುಂಬಿ ಬೆಳೆದಿಹಳು

ಕರುಣೆಯ ತೋರುವ ಕಾವೇರಿ
ಜನಿಸಿಹ ಸ್ಥಳ ತಲಕಾವೇರಿ||

## ನವರಾತ್ರಿಯ ಕೋಲ್ಮಿಂಚು

ಶೌರ್ಯಕೆ ಹೆಸರನು ಗಳಿಸಿಹ ಯೋಧರು
ಕೊಡಗಿಗೆ ಕೀರ್ತಿಯ ತಂದಿಹರು
ದಂಡನಾಯಕರ ತಂಡ ತಂಡವನೇ
ದೇಶಕೆ ಕಾಣಿಕೆ ನೀಡಿಹರು

ಕೆಚ್ಚೆದೆ ಕಲಿಗಳ ಈ ನಾಡು
ದೇಶದ ಕಣ್ಮಣಿ ಈ ಕೊಡಗು||

ಸಂಸ್ಕೃತಿ ಕಲೆಗಳ ಮೆಚ್ಚುವ ಜನಗಳು
ಕ್ರೀಡೆಯಲು ಮುನ್ನಡೆದಿಹರು
ದೇಶ ವಿದೇಶದಿ ಪ್ರಸಿದ್ಧ ಪಡೆದಿಹ
ಕ್ರೀಡಾಪಟುಗಳು ಇಲ್ಲಿಹರು

ಸದೃಢ ದೇಹದ ಯುವ ಜನರು
ದೇಶವ ಕಟ್ಟುವ ನಾಯಕರು||

ಗಂಧದ, ತೇಗದ, ಬೀಟೆಯ, ಹೊನ್ನೆಯ
ಮರಗಳು ಇಲ್ಲಿಯ ಕಲ್ಪತರು
ನಿತ್ಯವೂ ಹಸಿರನು ಉಸುರುತ
ಮೋಡವ ತಡೆಯುತ ಮಳೆಯನು ಸುರಿಸುವವು

ತಂಗಾಳಿಯು ತಿಳಿ ಜಲ ಕೊಳವು
ಪ್ರಕೃತಿ ನೀಡಿದ ಕಾಣಿಕೆಯು||

ಬಿ.ಎ. ಷಂಶುದ್ದೀನ್
ಮಡಿಕೇರಿ

# ಕನಸಿನಾ ಲೋಕದಲಿ



ಬಣ್ಣ ಬಣ್ಣದಾ ಕನಸು...
ಮನಸಿನೊಳಗೆ ಕನಸು
ಕನಸಿನಲ್ಲೇ ಮನಸು
ಮನಸಿನೊಳು ತುಂಬಿರುವ
ಕನಸು ನನಸಾಗಲು
ಹಾತೊರೆವುದೀ ಮನ

ಹಾತೊರೆವುದೀ ಮನ
ಗಿಡದಲ್ಲಿ ಹೂವಂತೆ
ಹೂವಲ್ಲಿ ರಸದಂತೆ
ರಸದಲ್ಲಿ ಸಿಹಿಯಂತೆ
ಜೀವನದೀ ಕನಸುಗಳು
ಕನಸಿಲ್ಲದ ಬಾಳು
ಶಶಿಯಿಲ್ಲದ ಇರುಳು
ಹೊಳೆವುದುಂಟೇ?
ಅದು ಹೊಳೆವುದುಂಟೇ?

ಕನಸುಗಳಾ ಹಕ್ಕಿ
ಗರಿಗೆದರಿ ಹಾರಿರಲು
ಕನಸಿನಾ ಲೋಕಕ್ಕೆ
ಮನಸು ಬೆರಗಾಗಿರಲು
ಬೆರಗಾದ ಮನಸಲ್ಲಿ
ಕನಸಿನಾ ಲೋಕದಲ್ಲಿ
ತೇಲಾಡದಾ ಹೃದಯ
ಜಗದೊಳುಂಟೇ
ಈ ಜಗದೊಳುಂಟೇ?

## ನವರಾತ್ರಿಯ ಕೋಲ್ಮಿಂಚು

ಜೀವನವೇ ಕನಸುಗಳ
ಮಹಾಪೂರವಿದ್ದಂತೆ
ಕನಸುಗಳೇ ಜೀವನದ
ಚೈತನ್ಯವಿದ್ದಂತೆ
ಕನಸಿನಾ ಲೋಕದಲೇ
ಬರೆದಿರುವೆ ಕವಿತೆಯನು
ನಿಮ್ಮ ಮುಂದಿಡುವ ಕನಸು
ನನಸಾಯಿತೇ
ಇಂದು ನನಸಾಯಿತೇ?

ಬಿ.ಕೆ. ನಿವೇದಿತಾ ಶೆಟ್ಟಿ
ಮಡಿಕೇರಿ

# ಶಿಕಾರಿ ಗುಡ್ಡ



ಶಿಕಾರಿ ಗುಡ್ಡ, ಈ ಹೆಸರು ಏಕೆ ಬಂತೋ...
ತಿಳಿದವರಿಲ್ಲ
ಗುಡ್ಡದಲ್ಲಿ ಪ್ರಾಣಿಗಳ ಬೇಟೆ ಆಡುತ್ತಿದ್ದರೋ?
ನಿಜ ತಿಳಿದ ಜನ ಇಂದು ಬದುಕಿಲ್ಲ.

ನಾವಂತೂ ಶಿಕಾರಿ ಮಾಡುತ್ತಿದ್ದೆವು
ಪ್ರಾಣಿ - ಪಕ್ಷಿಗಳನ್ನಲ್ಲ...
ಬೆಟ್ಟದ ನೆಲ್ಲಿಕಾಯಿ, ನೇರಳೆ
ಕಾಡುಸೀಬೆ, ಚೊಟ್ಟೆ ಹಣ್ಣುಗಳ...

ಶಾಲೆಗೆ ರಜೆ ಬಂತೆಂದರೆ ಗುಡ್ಡವೇ
ನಮ್ಮ ಆಟದ ತಾಣ
ಗುಡ್ಡ ಸುತ್ತಿ, ಮರಹತ್ತಿ ಹಣ್ಣುಗಳ ತಿಂದು
ಅಲ್ಲಿ ಹರಿವ ತಿಳಿ ನೀರ ತೊರೆಯಲ್ಲಿ ಮಿಂದು, ಮರದ
ನೆರಳಲ್ಲಿ ಮಲಗಿದ್ದಾಗ ಎಂತಹ ಸ್ವರ್ಗ ಸುಖ!

ಕಂಗೊಳಿಸುವ ಬಣ್ಣ ಬಣ್ಣದ ಹೂಗೊಂಚಲು
ನಳ ನಳಿಸುವ ಹಸಿರು ಹುಲ್ಲು
ಶಿಕಾರಿ ಗುಡ್ಡದ ತಾಣ ಸ್ವರ್ಗಕ್ಕೂ ಮಿಗಿಲು

ಇಪ್ಪತ್ತು ವರುಷಗಳ ಹಿಂದೆ
ನಾನು ಚಿಕ್ಕವನಾಗಿದ್ದಾಗ ಕಂಡಿದ್ದ
ಆಡಿ ನಲಿದಿದ್ದ ಶಿಕಾರಿ ಗುಡ್ಡ ಹೀಗಿತ್ತು...

ಈಗ.....

ಮೊನ್ನೆಯಷ್ಟೇ ಊರಿಗೆ ಬಂದಿದ್ದೆ
ಗುಡ್ಡ ನೋಡುವ ತವಕದಲ್ಲಿ ಹಸಿವನ್ನೂ ಮರೆತಿದ್ದೆ...
ಕಂಡದ್ದು ಬೋಳು ಗುಡ್ಡ...

ಹಸಿರು ಹೊದಿಕೆಯ ಕಳಚಿಕೊಂಡ
ಬರೇ ಬೆತ್ತಲಾದ ಒಣ ಗುಡ್ಡ...
ಹಣ್ಣು ಹೂವುಗಳ ಅಲಂಕಾರ ಬಿಡಿ
ಹಸಿರು ದೇವತೆ ಇಲ್ಲದ ಪಾಳು ಗುಡಿ...

ತಿಳಿ ನೀರ ತೊರೆಯ ಬದಲು
ಕೊಳಕು ಕಾಲುವೆ ಹರಿಯುತ್ತಿತ್ತು

ಬೋಳುಗುಡ್ಡ ಮೂಕವಾಗಿ ರೋದಿಸುತಿತ್ತು...

ಪ. ಬೇ. ತಮ್ಮಯ್ಯ
ಮಡಿಕೇರಿ

# ಮನೆ ತಲಪಬೇಕು ಬಿಡಿ ನನ್ನ



ಬರಬೇಡಿ ಬರಬೇಡಿ ನೀವು
ದಮ್ಮಯ್ಯ ನಿಮಗೆ
ನನ್ನ ಹಿಂದೆ ಹಿಂದೆ ಬರಬೇಡಿ
ಓ ಅರಿಷಡ್ವರ್ಗಗಳೆ
ಓಡಿ ಓಡಿ ನಾನು
ಹೊತ್ತು ಪಡುವಲ್ಲಿ ಮರೆಯಾಗುವ ಮುನ್ನ
ನಾ ತಲಪಬೇಕು ನಾ ತಲಪಬೇಕು
ಮೈ ಚಾಚಿ ಮಲಗಿ
ಚಿರಶಾಂತಿ ಪಡೆವ
ಶಾಂತಿಧಾಮ ನನ್ನ ಮನೆಗೆ !
ಅದು ಇನ್ನೂ ಇನ್ನೂ ಬಹಳ ದೂರವಿದೆ
ಅಂದು ಹೊರಟ ನಾನು
ಕಲ್ಲು ಮುಳ್ಳುಗಳ ತುಳಿದೆ
ಪ್ರಪಾತಗಳನಿಳಿದು ದಿಣ್ಣೆಗಳ ಏರಿದೆ
ಹರಿಯುವ, ಧುಮುಕುವ
ಹೊಳೆನದಿಗಳ ಈಜಿದೆ
ನಾರುವ, ಜಾರುವ
ಕೆಸರಲ್ಲಿ ಜಾರಿ ಬಿದ್ದೆದ್ದೆ.
ಹೆಜ್ಜೆಯ ಮೇಲೆ ಹೆಜ್ಜೆ ಇಟ್ಟು
ಇಲ್ಲಿಗೆ ನಾ ತಲಪಿದೆ
ಮನೆ ಮುಟ್ಟಲಿಲ್ಲ.
ಇನ್ನೂ ದೂರ ದೂರ ಬಹುದೂರ
ಇಹುದು ನನ್ನ ಶಾಂತಿಧಾಮ....
ಬಿಡಿ ನನ್ನ, ಬಿಡಿ ನನ್ನ

## ನವರಾತ್ರಿಯ ಕೋಲ್ಮಿಂಚು

ತ್ವರೆಯಿಂದ ತಲಪಲು ನನ್ನ ಠಾವಿಗೆ.
ನಿಮ್ಮ ಸಹವಾಸದಲಿ
ಅದೆಷ್ಟೋ ದಿನಗಳನು ಕೊಂದೆ
ನಿಮ್ಮೊಡನೆ ಚಕ್ಕಂದವಾಡಿ
ಅಹಮ್ಮಿನ ಮತ್ತಿನಲಿ
ನನ್ನ ನಾ ಮರೆತು....
ಮನೆ ಮರೆತು, ಗುಡಿ ಮರೆತು
ಬಾಳಿನರ್ಧದಿನ ವ್ಯರ್ಥವಾಯಿತು.!
ಹೊತ್ತು ಮುಳುಗುವ ಸಮಯ
ಸನಿಹವಾಯಿತು
ದೂರದಲಿ ಬೆಳಕೊಂದು ಮಿನುಗುತ್ತಿದೆ
ಅಲ್ಲಿಯೇ ನನ್ನ ಮನೆ
ಎಲ್ಲಿಯೂ ನಿಲ್ಲದೆ
ಓಡಿ ಓಡಿ ಎತ್ತಬೇಕಲ್ಲಿಗೆ
ಬಿಡಿ ನನ್ನ, ಬಿಡಿ ನನ್ನ
ಓ, ಅರಿಷಡ್ವರ್ಗಗಳೆ...

**ಕೆ. ಎ. ತಂಗವೇಲು**
**ಹಾಕತ್ತೂರು**

# ಪ್ರಶ್ನೆಗಳು



ಎದೆಯೊಳಗೆ ಭೋರ್ಗರೆಯುವ ಪ್ರಕ್ಷುಬ್ಧತೆ
ಕಾಡುವ ನಿರಂತರ ತಲ್ಲಣ...
ಪದೇ ಪದೇ ಕಾಡುವ ಪ್ರಶ್ನೆಗಳಿಗೆ
ದಯವಿಟ್ಟು ನೀವಾದರೂ ಹೇಳುವಿರಾ ಉತ್ತರ..?

"ಸತ್ಯಂ ಭ್ರುಯಾತ್ ಪ್ರಿಯಂ ಭ್ರುಯಾತ್
ನ ಭ್ರುಯಾತ್ ಸತ್ಯಮಪ್ರಿಯಂ..."
ಅಪ್ಪಣೆ ಕೊಡಿಸಿತಲ್ಲ ಅಂದು ಮಹಾಭಾರತ..?
"ಅಶ್ವತ್ಥಾಮ ಹತೋಹತ..."
"ಕುಂಜರಃ" ಶಬ್ದಕ್ಕೆ ಬಾಧಿಸಿತು
ಶಂಕನಾದದ ಝಂಝಾ ವಾತ
ಅಪ್ರಿಯ ಸತ್ಯಕ್ಕೆ ಆಗಲೂ ಕಾದಿತ್ತು ಪೂರ್ವಾಗ್ರಹದ ಭೂತ!
ಹಾಗಾದರೆ ಮಹಾಭಾರತದಿಂದ ನಾವು
ಕಲಿಯಬೇಕಾದದ್ದು ಬೇರೇನೂ ಇರಲಿಲ್ಲವೆ?

ರಾಮಾಯಣದಲ್ಲೇನು ಕಮ್ಮಿ?
ಅಡಗಿ ಕುಳಿತು ಬಾಣ ಪ್ರಯೋಗ ಮಾಡಲಿಲ್ಲವೆ ಶ್ರೀರಾಮ?
ಪಿತೃವಾಕ್ಯ ಪರಿಪಾಲಕ, ಸತ್ಯಸಂಧ, ಏಕಪತ್ನೀವ್ರತ ಪಾಲಕ,
ವಾಲಿವಧೆಗೆ
ಹೂಡಿದ ಹೂಟ ಹುನ್ನಾರ ರೂಕ್ಷತೆಗೆ ಸಲ್ಲಲಿಲ್ಲವೆ?

ಕೃತ, ದ್ವಾಪರಗಳ ಮಾತಂತಿರಲಿ ಬಿಡಿ
ಕಲಿಯುಗಕ್ಕೆ ಬರೋಣ
ಬದುಕಿಗೆ ಬದ್ಧನಾಗಿದ್ದ ಸಿದ್ಧಾರ್ಥ
ಐಹಿಕ ನಶ್ವರತೆಗೆ, ಕ್ಷಣ ಭಂಗುರಕ್ಕೆ ಎರವಾಗಿ
ಸಿದ್ಧಿ ಸಾಧ್ಯತೆಯ ಮನಗಂಡು ಬುದ್ಧನಾದದ್ದು

# ನವರಾತ್ರಿಯ ಕೋಲ್ಮಿಂಚು

ಜ್ಞಾನೋದಯದಿಂದ ಪ್ರಬುದ್ಧನಾದದ್ದು ಸತ್ಯ
ಹಾಗಂತ ಎಲ್ಲರೂ ಸಾಂಸಾರಿಕ ಸಿದ್ಧಾಂತ ವಿಮುಖರಾಗಿದ್ದರೆ
ಗತಿಶೀಲ ಬದುಕು ಗಬ್ಬೆದ್ದು ಹೋಗುತ್ತಿರಲಿಲ್ಲವೇ?

ಸತ್ಯ ಗಾಂಧೀಜಿಯವರ ಉಸಿರಾಗಿತ್ತು, ಕೊಸರಾಗಿತ್ತು
ಕೊನರುವ ಕೊರಡಿನ ಹಸಿರಾಗಿತ್ತು, ಯುಮನಿಯುಮಗಳಿಗೆ
ಬಸಿರಾಗಿತ್ತು, ಸ್ವಚ್ಛಂದತೆ ತಡೆಗೆ ಸ್ವಯಂ ಕಠೋರ ವಿಧಿಯಾಗಿತ್ತು
ಪಾಲಿಸುವುದಕ್ಕಿಂತ ಆರಾಧನೆಗೆ ಯೋಗ್ಯವಾದದ್ದೆಂದು
ಗಾಂಧಿಗೊಂದು ಗುಡಿಕಟ್ಟಿ, ಜೊತೆಗೆ ಅವರ ತತ್ತ್ವಗಳಿಗೂ
ಪಂಚೋಪಚಾರ ಪೂಜೆಗೆ ಅಣಿಗೊಳಿಸಿದ್ದು ಅನಿವಾರ್ಯವಾಗಿತ್ತೇ?

ಸಾಮ, ದಾನ, ಭೇದಗಳ ಕಟ್ಟಿಟ್ಟು "ದಂಡಂ ದಶಗುಣಂ ಭವೇತ್"
ಎಂದು ದಂಡ ಪಿಂಡಗಳಾದದ್ದು , ಓಡಿದರೆ ಓಡಿಸುತ್ತಾ
ಓಡಿಸಿದರೆ ಓಡುತ್ತಾ, ಕೊಲೆಗಡುಕರ, ಋಣಪಾತಕರ ಕೈಯಲ್ಲಿ
ಅಪಹರಿಸಲ್ಪಡುತ್ತಾ, ಅಡವಿ ಕಾನೂನಿಗೆ ಅಡಿಯಾಳಾಗುತ್ತಾ
ಷಂಡತನವನ್ನೇ ಆಭರಣದಂತೆ ಧರಿಸುತ್ತಾ,
ಸಾಯುತ್ತಾ ಬದುಕುವ ಈ ಬದುಕಿಗೆ ಅರ್ಥವಾದರೂ ಏನು?

ನಾಗೇಶ್ ಕಾಲೂರ್
ಮಡಿಕೇರಿ

# ಕಾರ್ಗಿಲ್ಲಿನ ಮೇಲೆ ಪದ್ಯ ಬರೆಯುವುದಿಲ್ಲ



ಇಲ್ಲ ನಾನು ಪದ್ಯ ಬರೆಯುವುದಿಲ್ಲ
ಕಾರ್ಗಿಲ್ಲಿನ ನರಸಂಹಾರ ಕುರಿತು
ಖುಲ್ಲಂ ಖುಲ್ಲ ಮಾತು ನನ್ನದು
ಖಂಡಿತ ನಾನು ಪದ್ಯ ಬರೆಯುವುದಿಲ್ಲ

ದೇಶಭಕ್ತರ ಕವಿಗೋಷ್ಠಿಯಲಿ ಓದಿ
ಚಪ್ಪಾಳೆತಟ್ಟಿ, ಗೌರವಕ್ಕೆ ಕೊಟ್ಟ ಕಡು ಸುಡು ಪಾನೀಯ ಹೀರಿ
ಲೋಟ ಕುಟ್ಟಿ ಸೂಕ್ಷ್ಮಜ್ಞರು ಕೊಟ್ಟ ಗರಿ
ಸಿಕ್ಕಿಸಿಕೊಳ್ಳುವ ಛಾನ್ಸು ಹೊಡೆಯುವುದಿಲ್ಲ.

> ಇಲ್ಲ
> ರಕ್ತದ ಹೊಳೆ ಹರಿವ ಕನಸನ್ನೂ ಕಾಣದ
> ನನ್ನ ಭಾಷೆಯ ವರ್ಣವರ್ಣಗಳಲ್ಲಿ
> ರಕ್ತ ತೊಟ್ಟಿಕ್ಕುವುದಿಲ್ಲ

ಇಲ್ಲ
ನಾನು ಬರೆದ ಅಕ್ಷರಗಳಿಗೆ
ಕಾರ್ಗಿಲ್ಲ ಶೂನ್ಯಾತಿಶೂನ್ಯ ಚಳಿ
ಚೂರಿಯಾಗಿ ಉರಿವ ಗರಿಮೆ ಇಲ್ಲ
ಸಿಡಿವ ಸೆಡವಿಲ್ಲವೇ ಇಲ್ಲ

> ಇಲ್ಲ
> ಬರೆಯುವುದಿಲ್ಲ ನಾನು ಕಾರ್ಗಿಲ್ಲ ಕುರಿತು
> ನನ್ನ ಪದ್ಯ ಸಾಲು ಸಾಲು ವೀರಸ್ವರ್ಗವೇರಿದವರ
> 'ಕಂದ್ಯನ್ನ ಕಣ್ಣಿನ ಕವಡಿ' ಉದುರಿಸುವ
> ಬೆನ್ನೀರ ತಡೆಯುವುದಿಲ್ಲ.

## ನವರಾತ್ರಿಯ ಕೋಲ್ಮಿಂಚು

ಇಲ್ಲ
ತಣಿಸುವುದಿಲ್ಲ ನಾನು ಬರೆವ ಪದ್ಯದ ಸಾಲು
ವೀರಸ್ವರ್ಗದಲಿ ರಂಭಾದಿಗಳ ಜೊತೆಗೂಡಿರುವವನ
ಇಹದ ನಾರೀಮಣಿಯ ಎದೆಯ ತಿದಿಯ ಬೇಗುದಿಯ
ಮಣಿಸುವುದಿಲ್ಲ ತಣಿಸುವುದಿಲ್ಲ
ಮತ್ತು
ರಸರಸವಾದ ತುಟಿ ತಳಿರುಗಳಿಗೆ ಮುತ್ತನಿಕ್ಕುವುದಿಲ್ಲ


ಇಲ್ಲ
ನಾನು ಬರೆಯುವುದರಿಂದ
ಕಾರ್ಗಿಲ್ಲ ವೀರ, ಕೋಟ್ಯಧಿಪತಿಗಳ
ಬಿಕರಿ ಬಂಡವಾಳವಾಗುವುದು ತಪ್ಪುವುದಿಲ್ಲ
ನಿರರ್ಥಕ ಜೀವಹಾನಿಗೆ ದ್ರವಿಸದ ಹೃದಯಗಳು
ಮಿಡಿಯುವುದಿಲ್ಲ, ಪಡಿ ನುಡಿಯುವುದಿಲ್ಲ

ಇಲ್ಲ
ಕಾರ್ಗಿಲ್ಲ ಕವಿಯಾಗುವುದಕ್ಕೆ ನಾನು ಒಪ್ಪುವುದಿಲ್ಲ
ನೀರ್ಗಲ್ಲ ಮೇಲೆ ಶಿಲ್ಪ ಕೆತ್ತಲಾಗುವುದಿಲ್ಲ ಯೋಧನಂತೆ ನನಗೆ
ಕಾರ್ಗಿಲ್ಲ ಮೇಲೆ ಪದ ಪದವಿಟ್ಟು ಕಟ್ಟಲಾಗುವುದಿಲ್ಲ ಪದ್ಯ ನನಗೆ
ನನ್ನ ಕಾವ್ಯ ಕನ್ನಿಕೆ ಆ ಎತ್ತರದಲ್ಲಿ ನರ್ತಿಸುವುದಿಲ್ಲ
ಅದಕ್ಕಾಗಿ ನಾನು ಪದ್ಯ ಬರೆಯುವುದಿಲ್ಲ
ಕಾರ್ಗಿಲ್ಲ ಕವಿಯಾಗಿ ಏರುವುದಿಲ್ಲ ಗಲ್ಲ.

ದಂಡಿಸಲಿ ಇತಿಹಾಸ ಅದಕಾಗಿ ನನ್ನ
ತಪ್ಪಿಹೋಗಲಿ ಬಿಡು ನನ್ನ ಬಂಗಾರ ಸಣ್ಣದನ್ನ
ಯಾಕಾಗಿ ಈ ಬವರ ಎಂಬುದು ಅರ್ಥವಾಗದ ಮುನ್ನ
ಹೇಗಾದರೂ ಬರೆಯಲಿ ಪದ್ಯವನ್ನು?

ಯು. ಎಸ್. ಶ್ರೀಧರ ಆರಾಧ್ಯ
ಮಾದಾಪುರ

# ಅವಳೊಂದಿಗೆ



ಮಬ್ಬು ಮಂಜಿನ
ಮುಂಜಾವಿನಲಿ
ಎಲೆ ಬಳ್ಳಿಹಂದರದಲ್ಲಿ
ಹೊಳ ಹೊಳೆವ ಮಣಿ
ಮುತ್ತಿನ ಹಾರದಲಿ...
ನಳನಳಿಸಿ ನಿಂದವಳ ಜೊತೆ...
ಕೊಂಚ ಮಾತನಾಡಬೇಕಾಗಿತ್ತು..!

ಹರಿವ ಮ್ಲಾನವದನೆ
ಸುರಿವ ಬೆಳ್ನೊರೆಯಲಿ
ನಗುವ ಚಂಚಲೆ...
ಅಣು ರೇಣು ಸಕಲ ರಾಜೀವಜಾಲ
ತಂತಿ ಮೀಟಿದ ನೂಪುರುದ ನಾದ
ತರಂಗಿಣಿಯ ಮನೋಲಹರಿ
ಏನೆಂದು ತಿಳಿಯಬೇಕಾಗಿತ್ತು..!

ಅಲ್ಲಿ ಉತ್ತರದ ಹೆಪ್ಪುಗಟ್ಟಿದ ಹಿಮಗಿರಿಯ
ನೀರ್ಗಲ್ಲುಗಳ ಬೆಳ್ಳಿಚಾದರದ ಅಡಿಯಲ್ಲಿ
ಕಣ್ಣೆವೆ ಇಕ್ಕದೆ ನಿನ್ನ ಕಾಯುವ ಯೋಧರ ಬಳಗ
ನೀನೆ ಸ್ಫೂರ್ತಿ ಇರಬೇಕು... ಅಂದುಕೊಂಡೆರಾ

ಆದರೂ...ಇಲ್ಲೇ ನಿನ್ನ ಮಡಿಲಲ್ಲೇ
ಕೆಸರು, ಕೊಂಪೆಗಳಲಿ, ಜಾಲಾಡುವ ಎಳೆಯ ಕೈಗಳಿಗೆ,
ಕನಸುಗಳನ್ನು ಕಳಕೊಂಡ ಮನಸುಗಳಿಗೆ
ಅಕ್ಷರದ ಬಲವಿಲ್ಲದ ಚಿಣ್ಣರಿಗೂ ನಿನ್ನ ಪ್ರೀತಿ ಬೇಕಾಗಿತ್ತು..!

ಆಕಾಶವ ಹಂದರ ಮಾಡಿ
ಬ್ರಹ್ಮಾಂಡದ ಬಾಗಿಲು ತೆರೆದು...
ತಾರೆಗಳ ತೋರಣ ಕಟ್ಟಿ
ಬೆಳದಿಂಗಳ ಬೆಳಕು ಚೆಲ್ಲುವ ಬಲ
ಈ ನಾಡ ಮಕ್ಕಳಿಗೆ ನೀನು ನೀಡು ತಾಯೆ...!

ಬಿ. ಎನ್. ಪುಷ್ಪರಾಜ್
ಮಡಿಕೇರಿ

# ಬೋಳುಕ ಮಂಡ

ಕೇದಮನೆ ಕಾಳಪ್ಪ, ಕಕ್ಕಡ ತಿಂಗತ್
ಕಟ್ಟ್ಂಜ ಮರ್ಂಜಿತ್ ನಡುಪೊಳಿಂಜ
ಇದ್ನರ್ಂಜಿ ಒನ್ನಾಂದ್ ನಾ ಪೋಯಿ ನೋಟಣೆ
ಅಜ್ಜನೆ ಪರ್ಂದೋರ್ ಕತೆಮಾಯ ಕವನ..!

ಚತ್ತ್ರೋರ್ ಬೋಳುಕ ಮಂಡನ ಚಾಕ್ನ
ಕಾಳಪ್ಪಜ್ಜಂಡ ಕತೆ ಕೇಳಿರೊ
ಆದರೆ ತಿಂಗತ್ ಕಕ್ಕಟ್ರಾಬರಿ
ಕಲ್ಲ್ ಜಾರಿಬುದ್ದ್ ಕಾಪೊಳಿಂಜ
ಮೊರೆರ ಪಡೆರಡಿ ಕೋಪಟೆ ಕೂಟಿತ್
ಮದ್ದ್ನರ್ತಿತ್ ತೇಚತ್ ಮಾಂವಿ
ಪೆತ್ತವಳೆನ್ನನೆ ಮರಕಡ್ ಕುಞ್ಯಳೆ..!

ಪುಟ್ಟ್ನರ್ಂಜವ ಅವಳೇ ಅಲ್ಲಾ..?
ಬಕ್ಕರೆ ಕುಞ್ಞಿನ ಗೋಣೆಲ್ ಆಕಿತ್
ಕೊಟ್ಟ್ಲೆ ಬೊಳಿಕಂಡ ಆ ದಿನವೊ
ಪಳಪಳ ಮಿನ್ನುವ ಬೊಳ್ಳಿಕಾಮೊಯಿರ
ಬಾಲಾಟಿ ಮೊಣ್ಣಿಯೆ ಬೊಳ್ಂದತಂದ್..!

ಕೊದಿರಾಜನಾಪದು ಕುಂದ್ಡಿ ಓಡಿತ್
ಕೆಲದುಂಬ ಮೇವಿಂಜ ಆ ಚಾಯಿ ಬೋರೆ..!
ಉಪ್ಪಕ ನಿಪ್ಪುಕ್ ನೊಗಬೆಚ್ಚಿತಾನದೆ
ನಳಮಿಞ್ಞ, ನಾಮಿಞ್ಞ ನಡ್ಪದೆ ಚಾಯಿ..!

ಕೊಡ್ತಕ ಕಂಜಿನ ಕೆಲದುಂಬ ಕುಡ್ಚಿತ್
ಕ್ಯೈಯಿಸ ನಕ್ಕುವ ತರಿತರಿ ನಾವು
ಮುತ್ತ್ಂದ್ ಕೊಡ್ಪಕ ಕಣ್ಣೀರ್ ತುಳಿಯಾಯಿ

## ನವರಾತ್ರಿಯ ಕೋಲ್ಮಿಂಚು

ಒಕ್ಕೋದ್ ಕಂಡನೊ ಮೂಡ್‌ಲ್‌ಡೀ
ಮುಳ್ಳ್‌ರ ಬಟ್ಟೆಲೆ ನಡ್‌ಂದಿತ್ ಪೋನಕೊ
ಕೆಲದುಂಬ ನೀಮೇಂಜಿ ನಡ್‌ಪಿಂಜಿಯ..!

ಉರಿಬೆದ್‌ಲೊಸ್ನಾಂದ್ ನರಿಕಡ್‌ಂದಿ ಕಡಿಪಕ
ನೀ ಬಾಲ್ ನೇತಿತ್ ಓಡಿಯಲ್ಲ..?
ನಾ ತೆಳಿಚ ಆ ತೆಳಿ ಅಂದಲ್ಲ ಇಂದೆಕು
ಅಲೆಯಲೆಯಾಯಿತ್ ತೇಲಿಬಪ್ಪ..!
ಕಾಯಿನ, ಚಕ್ಕೆನ ಕಾಟೋಕ ಓಡೋಡಿ
ಬಾಯಿಲ್ ನೀರೆಲ್ಲ ಪರ್‌ಂಜತಲ್ಲ..!

ಕುಂದ್‌ಲ್ ಕೆನೆಬೆಚ್ಚಿ ನಡ್‌ಪೋರ್ ಗತ್ತ್‌ಕ್
ನೀರಜನಾಯಿತ್ ಮೆರಿವಿಂಜಿಯ
ಆ ನಿನ್ನ ಕಾಪಕ್ ನಾನಿಲ್ಲತಾಪಕ
ಬಲವಿಲ್ಲತಾಚಲ್ಲ, ಎನ್ನಂಗಪ್ಪ..?
ಕೇರ್‌ನ ಉತ್ತಿತ್ ಬುಟ್ಟಕೊ ಫಲವಿಲ್ಲೆ
ಉರ್‌ಂಡಿತ್ ಬುದ್ದಿಯ ಎದ್ದದೆ ಇಲ್ಲೆ
ಕಾಕೆನು, ನಾಯಿಯೂ ಜೀಂವೊಡೆ ಬಲಿಪಕ
ನಿನ್ನೀಡ ಕಣ್ಣ್‌ಲ್ ಒಕ್ಕ್‌ಚಿ ಚೋರೆ..!

ಆಯಿರ ಪರ್‌ಂದಕ ನೀನಿಲ್ಲೆ ಇಂದ್
ನಾನಾಳೆ ಬಾವೊಕ ಮರ್‌ಪಿನೊ ನಿನ್ನ
ಕೊಟ್ಟ್‌ಲ್ ಪುಟ್ಟ್‌ನ ಬೊಳ್ಳಿಕಾಮೊಯಿರ
ಇಞ್ಞೊಮ್ಮ ಪುಟ್ಟತೆ ನಳಯಿಲ್ಲೆ ನೀಕ್..!

ಪಾಸುರ ರ‍್ಯಾಲಿ ಕಾರ್ಯಪ್ಪ
ಗರ್ವಾಲೆ

# ಕಾವೇರಿ ದರ್ಶನ



ಕವೇರ ಕನ್ನಿ ಕಾವೇರಿ ನಾ ಬಂದ ದರ್ಶನಕ್
ದಾವುಲ್ ಬಾಯಾರಿ ಬಂದ ನೀಡಲ್ಲಿಕ್
ಬಾವಕ್ ಬಂದಿಯಾ ನೀ ತಲಕಾವೇರಿಕ್
ಬಾವದೆನ್ನನೇಂದ್ ಕಾಟಿಯ ಈ ಜಗಕ್
ನೀಕಿಲ್ಲೆ ಜಾತಿ ಭೇಧತ್‌ರ ತಾಪ
ನೀನೊಕ್ಕನ ಜಾಗೆಲ್ಲ ನೀತಿ ಧರ್ಮಡ ಕೂಪ
ಒಕ್ಕಿತುಪಕಾರಿ ನೀಕಿರುವಿಯ ಜನಡ ಪೈಪು
ತಿಕ್ಕಿರುವಿಯ ಕುಳಿಚಯಿಂಡ ಪಾಪ

ನೀಡ ಪೆದತೇ ನಿಂದಿತ್ ಪಕ್ಷಿಧಾಮ
ನಾಡ್‌ಕ್ ನೆಲೆಯಾಯಿ ನಿಂದಿತ್ ರಂಗನಾಥ
ಕೇಡ್ ಬಯಂದ ಟಿಪ್ಪು ವರುವ ಸಂಗಮ
ಕಡೇಕಾಚಿ ನೀಕ್ ವಿಶ್ವೇಶ್ವರ ಕಟ್ಟೆ ಬೃಂದಾವನ

ಜೀವ ಬಂದದು ಕುಳಿಪ ನೀರ್ ನೀಡದೆ
ಜೀವ ಪೋಪಕ ಕುಡಿಪ ನೀರ್ ನೀಡದೆ
ಜೀವ ಪೋನಲ್ಲಿ ಕುಳಿಪ ನೀರ್ ನೀಡದ್
ಜೀವತ್‌ರ ಬೂದಿ ಒಕ್ಕುವ ನೀರೂ ನೀಡದೆ
ಚಾವಕ ಬಾಯಿಕ್ ನೀರೂ ನೀಡದೇ
ಜೀವತ್‌ರ ಬೊಳೆಕ್ ನೀರೂ ನೀಡದೇ
ಜೀವ ಬೆಂಜಾನ ತಣತುವ ನೀರೂ ನೀಡದೇ
ಜೀವ ಪೋಪಾಂಡೊಳ್‌ಲ್ ದರ್ಶನಾಡ್ ನೀಡದೇ

ಚೇಂದ್ರಿಮಾಡ ಗ. ಮುತ್ತಪ್ಪ
ಕುಶಾಲನಗರ

# ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಗೇನತ್



ಕೊಡಗ್‌ರ ವೀರನ ಶೂರನ ಪೊಗಳಿ
ಪಡೆರ ಸೇನಾನಿನ ತುದ್‌ಚಿ ನಾ ಪಾಡ್ವಿ
ದೃಢತೆ ಶೌರ್ಯತ್‌ರ ವಿಜಯವಿಕ್ರಮಿನ
ನೈಪುಲ್ ದೇವಳ ಕಂಡ ಸಾಹಸಿನ

ಉದಿಚ ಮನತ್ತ್‌ರ ಪೆದಪೋನ ಕಲಿನ
ವಿಧಿರ ಮಾಟತ್ ಜನ್ಮ ತಾಳ್‌ನ ಸರಿನ
ಎದೆಧೈರ್ಯತ್ ಎದಿಕೆ ನಿಂದಂವನ

ಮದತಾನೆರನ್ನತ ಶಕ್ತ ಕ್ಷತ್ರಿಯನ
ಧರಣಿ ಮಂಡಲ ಮಧ್ಯಭಾಗತ್ ಉಳ್ಳ
ಸಿರಿದೇವಿ ಕಾವೇರಿ ವರ ತಂದಿತುಳ್ಳ
ಪರಿಪರಿ ಸೊಬಗ್‌ರ ಕೊಡಗ್ ದೇಶತ್
ನರಿಕುಞ್ಞಿ ಪುಟ್ಟಿತ್ ನರಸಿಂಹನಾಯ್ತ್

ಕಾವೇರಿ ದೇವಿರ ಮಕ್ಕಡ ನಾಡ್
ಪಾವನ ಮಾತೆರ ತೀರ್ಥತ ಬೀಡ್
ದೇವಡ ದಯತ್‌ಲ್ ಸೌಭಾಗ್ಯ ಸಿರಿಲ್
ನಾವುಲಮೃತ ದುಂಬಿ ಪೊಗಳ್ವಂತ ಗೂಡ್

ಕುಂದ್ ಬೊಟ್ಟ್‌ರ ಬರಿಲ್ ಜನಕೂಡಿ ಬಾಳ್ವ
ಚಾಯಿ ಚಂದತ್‌ನ ಎಣ್ಣೆ ತ್‌ೕಪ ಕೈಯ್ಯುವಾ
ಬಂದಿತ್ ನೋಟಲ್ಲಿ ಸೆಲ್‌ರ ಬಾಣೆ
ಇಂದಿಲ್ಲಿ ಸುಂಠಿಯೇ ಬಲ್ಯೋರ್ ಊಣ್

ಕುಂದ ಬೊಟ್ಟ್‌ರ ಬರಿಲ್ ಕೊಡಂದೇರ ಮನೆಲ್
ಬೆಂದುವ ಬಾಳ್ವಂತ ದೇವಡ ನೆಲೆಲ್

ಚಂದತ್ತ ಮನೆತನ ಕಾರ್ಯಪ್ಪಂಡ್ಂಡ
ಅಂದೇತ ಐನ್‌ಮನೆ ಬೊಳ್‌ಚ ಪಡ್‌ಂದಂಡ್

ಜನವರಿ ತಿಂಗತ್ ಶತಮಾನ ಮುಂಬ್
ಜನನವಾಚಿಲ ಶೂರ ಶುಭನಾಳ್‌ರಂದ್
ಖನಪಟ್ಟಿ, ಮಾದಪ್ಪ ದಂಪತಿಯಡ ಮೋಂವ
ತನಯ ಕಾರ್ಯಪ್ಪಂದ್ ಪೆದ ಪೋಸ ಬೈಂಬ

ಶನಿವಾರಸಂತೆಲ್ ಪುಟ್ಟ್‌ನ ಕುಞ್ಞಿ
ಮನ ಬೊಳೆವ ವಿದ್ಯೆನ ಮಡಿಕೇರಿಲ್ ಪಡ್‌ಚಿ
ಖನ ಜ್ಞಾನ ಪಡೆವಕ್ ಮದ್ರಾಸ್ ಪೋಚಿ
ಮನತುಳ್ಳದಾಸೆಕ್ ಸೇನೆ ಸೇರ್‌ಚಿ

ಆರ್ಮಿ ಕಮೀಷನ್ ಪಡ್‌ಂದ ಶಿಸ್ತ್ ಸಿಪಾಯಿ
ಯೊಮ್ಮಲೆ ಕೆಟ್ಟಿತ್ ಕಾಲೇಜ್ ಸೇರಿ
ಅಮ್ಮೆರ ದಯತ್‌ಲ್ ಪದವಿ ಪಡಂದ್
ಆರ್ಮಿಲ್ ಲೆಫ್ಟಿನೆಂಟಾಯಿ ಮೆರ್‌ಂದ್
ಇರಾಕ್‌ಲ್ ಬಾಗ್ದಾದ್ ದಂಗೆನ ಮುರಿಚಿ
ಪೊರ್ಮೆ ದೇಶತ್ ತರಬೇತಿ ಕುರ್‌ಚಿ
ಪೆರಿಯ ಸೇನೆಲ್ ಬ್ರಿಗೇಡ್ ಮೇಜರಾಯಿತ್
ಕರ್ನಲ್ ಪದವಿಕೇರ್‌ಚಿ ಮುಂಬ್

ಪಟ್ಟಾಳ ಕಮಾಂಡರ್ ಜನರಲ್ ಆಯಿತ್
ಒಟ್ಟಾರೆ ಸೇನೆಲ್ ಪೆರಿಸ್ಥಾನ ಪಡಂದ್
ದುಷ್ಟ ರಝಾಕ್‌ಡ ದಂಗೆನ ಚವುಟಿ
ಕಷ್ಟ ಕಾಶ್ಮೀರ ಪಡೆಲ್ ಜಯಭೇರಿ ಪೊಜ್ಜಿ
ನೆಲ, ಜಲ, ವಾಯು, ಪಡೆ ಸೇನಾನಿಯಾಯಿತ್

## ನವರಾತ್ರಿಯ ಕೋಲ್ಮಿಂಚು

ಕಲಿಕೊಡಗ್ ಕಾರ್ಯಪ್ಪ ನೇಮಕ ಆಯ್ತ್
ಪಲತರ ಕಾರ್ಯತ್ ಕೇಳಿ ಕೋಂದ್
ಗೆಲುವು ಪಡಂದತ್ ಜನರಲ್ ಅಂದ್
ದೇಶ ವಿದೇಶತ್ ಬಿರ್‌ದ್ ಬಾವಲಿಲ್
ನಾಶಯಿಲ್ಲತ ಬಲ್ಯ ಕೀರ್ತಿಕಲಶತ್‌ಲ್
ದೇಶಸೈನ್ಯತ್ ಪುದಿಯೋರ್ ಪುರ್‌ಡ್
ವೇಷ ಭೂಷಣ ಶಿಸ್ತ್ ಕೂಡ್‌ಚಿ
ಮೆರ್‌ಂದ್

ಸೇನೆರ ಸೇವೆಲ್ ಗೆಲುವುರ ಲಕ್ಷ್ಮಿ
ತಾನೆ ಬಂದಿತಲ್ಲಿ ಕಾರ್ಯತ್ ಶಕ್ತಿ
ಮಾನ್ಯತೆ ಪಡ್‌ಂದತ್ ಪಲತರ ಬಿರ್‌ದ್
ಬಾನತ್ ಮಿನ್ನುವ ಸೂರಿಯ ಬೊಳಿಲ್
ದಂಡನಾಯಕನಾಯ್ತ್ ಪುಂಡಳ ಮದ್‌ಚಿ
ತುಂಡ್ ನಾಯಕಳೆಲ್ಲ ಬೊತ್ಯಂಡ್ ಪೋಚಿ
ಗಂಡ್‌ಗಲಿರ ಸಿಂಹ ಭೀರ್ಯತ್ತ್‌ಲಾಚಿ.

ಚೆರ್ಪತ್ ಮಂಗಲ ಕೈಂಜ ಕಾರ್ಯಪ್ಪ
ಅರ್ಪಣೆ ಮಾಡ್‌ಚಿ ದೇಶ ಸೇವೆಲ್
ಅಪ್ಪಂಡನ್ನನೆ ಶೂರ ನಂದ ಕಾರ್ಯಪ್ಪ
ಇಯಂಗಡ ಮೋವ ನಳಿನಿ ಕಾರ್ಯಪ್ಪ
ರೋಷನಾರತ್‌ಲಿಂಜ ಜನರಲ್ ಕಾರ್ಯಪ್ಪ
ದೇಶ ವಿದೇಶತ್ ಮನ್ನಣೆ ಪಡ್‌ಂದ್
ಈಶ ಸೇವೆನ ಮಾಡಿ ದೇಶ ಸೇವೆಲ್
ಶಾಶ್ವತ ಕೀರ್ತಿಲ್ ಮೆರ್‌ಂದ ಮಾವೀರ

ಕೀರ್ತಿ ಕೇಳಿನ ನೋಟಿ ರಾಷ್ಟ್ರ ಸರ್ಕಾರ
ತೊತ್ತಿ ಪ್ರಧಾನತ್ ಫೀಲ್ಡ್ ಮಾರ್ಷಲ್ ಬಿರ್‌ದ್
ಸತ್ಯ ಶೀಲ ಶಿಸ್ತ್ ಕರ್ತವ್ಯ ನಿಷ್ಟೆ

## ನವರಾತ್ರಿಯ ಕೋಲ್ಮಿಂಚು

ನಿತ್ಯ ಬೆಚ್ಚಿತ್ ದೇಶ ಸೇವೆ ಮಾಡ್‌ಚಿ

ಯುವಜನಕೆಲ್ಲಕೂ ಶಿಸ್ತ್‌ರ ಮಂತ್ರ
ನವಯುಗ ವೀರ ಸಂದೇಶ ಸಾರಿತ್
ಇರ್ ಪೊವ್‌ಲ್ ದೇಶ ಸೇವೆ ಮಾಡಿತ್
ನೈಚಿ ಕಾರ್ಯತ್ ಮೋಳ್‌ಕೇರಿತ್

ಬಯತ್ ಕಾಲತ್ ನೂರಾಂಗ್ ಮುಂಬ್
ನಯಶೀಲ ಸೇನಾನಿ ಕಾರ್ಯಪ್ಪ ವಿಧಿರ
ನಿಯಮತ ಪೋಲೆ ದೇವಡ ಪಾದ
ಸೇರಿತ್ ಮುಕ್ತಿ ಪಡ್‌ಂದತ್ ಬೋಜತ್

ಶತಮಾನೋತ್ಸವ ಪರ್ವಕಾಲತ್
ಗತ್ತ್ ಗಾಂಭೀರ್ಯತ್ ಕೊಡಗ್ ಸಂಸ್ಕೃತಿನ
ಪೊತ್ತಿತ್ ಪೋತ್‌ನ ಕುಲತ ಕಣ್ಮಣಿನ
ತೊತ್ತಿತ್ ಪಾಡುವಿ ಕೆಚ್ಚೆದೆ ನರಿನ

ವಿ. ಎಸ್. ರಾಮಕೃಷ್ಣ
ಕುಶಾಲನಗರ

# ಪ್ರಕೃತಿ ದೇವಿ



ದಾರಿವ... ಇವ ದಾರ್ ಇವ
ದಾರಿವ... ಇವ ದಾರ್ ಇವ
ಪಚ್ಚೆನೆ ಪೊಡವೆಲ್ ಎಲ್‌ಂಗುವವ
ಪೊಂಗುರಿ ಚಂದ್ರನ ಚೂಡ್‌ನವ
ಒಕ್ಕುವ ನೀರ್‌ರ ನೀಲ ಕನ್ನಡಿಲ್
ಬಾಂಗಿತ್ ಮೂಡ್‌ನ ನೋಟುವವ
ತಾಂಡದೆ ಚಾಯಿನ ಕೊದಿವಳವ

ದಾರ್...॥

ಕೇಕ್‌ಲ್ ಪಡಿ ಎಡ್‌ತ್ ರಂಗೋಲಿ ಇಟ್ಟಿತ್
ನೇರಕ್ ಆರತಿ ಎಡ್‌ಪಂತವ
ಮಂಜಿರ ಮುಸ್‌ಕ್‌ನ ಇಟ್ಟಿಂತವ
ದಿಕ್ಕ್‌ಂಜಿ ದಿಕ್ಕ್‌ಕ್ ಮುತ್ತ್‌ರ ಬೆದ್‌ಕೋಲ್
ಗಿಡತ್‌ರ ಸೆರೆ ಸೆರೆ ನೆಯ್ಯುವವ
ಸ್ವರ್ಗತ ಸೀಮೆಲೆ ಉಳ್ಳಂತವ

ದಾರ್...॥

ಕಾಡ್‌ಂಜಿ ಕಾಡ್‌ಕ್ ಮರ್‌ದನಿ ಕೊಡ್‌ಪಂತ
ಗಂಧರ್ವ ರಾಗತ್ ಪಾಡುವವ
ಜಗತ್‌ನ ಕಾಕಿತ್ ಒಪ್ಪುವವ
ಕಾಂಜಿತ್ ಚುರ್‌ಂಗ್‌ನ ಸೂರಿಯ ದೇವನ
ತಣ್ಣನೆ ಗಾಳಿಲ್ ಜೂಕುವವ
ಜೀವಕೆಲ್ಲ ತಂಪುನ ಕೊಡ್‌ಪಂತವ

ದಾರ್...॥

ಲೋಕವೇ ಮಾಡ್‌ನ ಪಾಪತ್ತ ಚೋಪುನ
ಪಡಿಞಾರ್ ಕಡತ್‌ಲ್ ಕತ್ತುವವ
ನೆಲ್‌ಚಿರ ಪಾಬೊಳಿಲ್ ಕಳಿಪಂತವ
ಬಾನತ್ ಮೀನ್‌ರ ಮಿನ್ನುವ ಕಣ್ಣ್‌ಲ್
ಕಣ್ಣ್ ಮುಚ್ಚಾಲೆನ ಕಳಿಪಂತವ
ಮಿನ್ನಂಬುಳುರ ಚಿಂಗಾರ ಇಟ್ಟಂತವ
ಮೋಡತ್ ಮುಕ್ಕ್‌ಲ್ ಆಕಾಶ ಮುಚ್ಚೋಕ
ರೌದ್ರಾವತಾರತ್‌ನ ಎಡ್‌ಪಂತವ
ಬಾನ್‌ಂಜಿ ಭೂಮಿಕ್ ಎತ್ತುವವ
ಗುಡುಗುಡು ಗುಡ್‌ಗಿತ್ ತೆಡ್ ತೆಡ್ ಮಿನ್ನಿತ್
ಮಳೆ ಪೊಜ್ಜಿ ನೆಲತ್‌ನ ತಣತುವವ
ಪೊಳೆಕೆರೆನೆಲ್ಲಾನೋ ತಣತುವವ

ದಾರ್...॥

ನೆಲವೆಲ್ಲಾ ಪದಬುದ್ದ್ ಕುರುವೆಲ್ಲ ಮೊಳೆಪಕ
ಗಿಡಮರ ಬಳ್ಳಿಲ್ ಬೊಳೆವಂತವ
ಚೋದಾನ ರಸತ್‌ಲ್ ಅಲಿವಂತವ
ಕಾಲಕ್ ಸೆರಿಯಾಯಿ ಲೋಕತ್ ಬದ್‌ಕ್‌ಲ್
ತರತರ ರಂಗ್‌ನ ಮೆರೆವಂತವ
ಜಡಕೆಲ್ಲ ಚೇತನ ಕೊಡ್‌ಪಂತವ

ದಾರ್...॥

ಕೆ.ಎಂ. ದೇವಕಿ
ವೀರಾಜಪೇಟೆ

# ಎಲ್ಲಿ ಕ್‌ಟ್ಟು ಶಾಂತಿ



ಎಲ್ಲಿ ಕ್‌ಟ್ಟು ಶಾಂತಿ..?
ಎಕ್ಕ ಕ್‌ಟ್ಟು ಶಾಂತಿ..?
ಇದ್ ಶಾಂತಿಕಾಯಿತ್ ಕಾತಂಡುಳ್ಳ ನಂಗಡೋರ್ ಭ್ರಾಂತಿ
ಸ್ವಾತಂತ್ರ್ಯ ಬಂದಿತಾಚಿ ಜನ ಸ್ವಾರ್ಥಿಯಳಾಯಿಪೋಚಿ
ದೇಶ ಅಧೋಗತಿರ ಬಟ್ಟೆ ಪುಡ್‌ಚಿ ಅವಸಾನ ಕಾಂಬಕಾಚಿ
ಇಂಥ ನಂಗಡ ದೇಶತಿಂದ್ ಎಲ್ಲಿ ಕ್‌ಟ್ಟು ಶಾಂತಿ..?
ಎಕ್ಕ ಕ್‌ಟ್ಟು ಶಾಂತಿ.....?

ಪಾಕ್ ಪಡೆ ಪೊತ್ತ್ಂಡುಂಡ್ ದೇಶತ್‌ರ ತೆರಿಲ್
ಚೋರೆರ ಪೊಳೆ ಒಕ್ಕಿಯಂಡುಂಡ್ ಉರ್ತ ಮಾರಿಯಡೆಡೆಲ್
ಕಾಡ್ ಕಳ್ಳನೊಬ್ಬ ಪೆರ್ತಂಡ್ ನೆಮ್ಮದಿನ ಕೆಡ್‌ತಿಯಂಡುಂಡ್
ಭ್ರಷ್ಟಚಾರ ಮೆರ್‌ಂದಂಡುಂಡ್
ಲಂಚ ತುಳ್ಳಾಡಿಯಂಡುಂಡ್
ಇಂಥ ನಂಗಡ ದೇಶತಿಂದ್ ಎಲ್ಲಿ ಕ್‌ಟ್ಟು ಶಾಂತಿ...?
ಎಕ್ಕ ಕ್‌ಟ್ಟು ಶಾಂತಿ...?

ದೇಶ ರಾಮರಾಜ್ಯವಾಪಕಿಲ್ಲೆ ದುಷ್ಟ ರಾವಣಂಗಡ ಎಡೆಲ್
ಗಾಂಧೀಜಿ ಇಞ್ಞಿ ಪುಟ್ಟುವಕಿಲ್ಲೆ ಕೊಲೆ ಪಾತಕಿಯಡ ನಡುಲ್
ಸತ್ಯ ನ್ಯಾಯ ತಾಂದಂಡುಂಡ್ ಅನ್ಯಾಯ ಮೋಸ ನೊಂದಂಡುಂಡ್
ಜನ ಮಾನವೀಯತೆ ಮರ್‌ಂದಂಡುಂಡ್ ರಾಕ್ಷಸಂಗಳಾಯಂಡುಂಡ್
ಇಂಥ ನಂಗಡ ದೇಶತಿಂದ್ ಎಲ್ಲಿ ಕ್‌ಟ್ಟು ಶಾಂತಿ..?
ಎಕ್ಕ ಕ್‌ಟ್ಟು ಶಾಂತಿ....?

ಪಾಲೆರ ರಾಣಿ ಅಪ್ಪಣ್ಣ
ಪೇರೂರ್

# ಸಾಧನೆ



ನೊಂಬಲ ಇಲ್ಲತೆ ಸಾಧನೆ ಇಲ್ಲೆ
ಕೆತ್ತಿ ಕೊರ್‍ಂಡತೆ ರೂಪ ಇಲ್ಲೆ
ನೊಂಬಲ ಇಲ್ಲತೆ ಒಂದೂ ಪುಟ್ಟುಲೆ
ಗಾಳಿ ಇಲ್ಲತೆ ದಾರೂ ಬದ್‍ಕುಲೆ
ನೀರಿಲ್ಲತೆ ದಾವು ಅಡ್‍ಂಗುಲೆ
ತಿಂಬಕಿಲ್ಲತೆ ಜೀವ ಬದ್‍ಕುಲೆ

ಮೋಡ ಇಲ್ಲತೆ ಮಳೆ ಇಲ್ಲೆ
ಸಮುದ್ರ ಇಲ್ಲತೆ ಅಲೆ ಇಲ್ಲೆ
ಪೊಳೆ ಇಲ್ಲತೆ ಪುಣ್ಯ ತೀರ್ಥ ಇಲ್ಲೆ
ದೇವಳಿಲ್ಲತೆ ಗುಡಿ ಇಲ್ಲೆ
ಪೂ ಇಲ್ಲತೆ ಪೂಜೆ ಇಲ್ಲೆ
ಫಲ ಇಲ್ಲತ ಮರ ಉಪಕಾರಕಿಲ್ಲೆ
ಉಪಪಿಲ್ಲತ ಊಟ ಸೆರಿ ಇಲ್ಲೆ
ಬೆತ್ತಲೆ ಬಿಂಬತ್‍ನ ಮುಚ್ಚತಿಲ್ಲೆ
ಮಾಯತ್‍ರ ಶಕ್ತಿನ ಅರ್‍ಂಜಂವನಿಲ್ಲೆ
ಬೊಳಿ ಇಲ್ಲತೆ ಗಾಳಿಕ್ ಶಕ್ತಿ ಇಲ್ಲೆ


ಜ್ಞಾನ ಇಲ್ಲತ ಬುದ್ಧಿ ಕಲ್‍ರ ಪೋಲೆ
ಭಾವ ಇಲ್ಲತಲ್ಲಿ ಶೂನ್ಯಕ್ ನೆಲೆ

## ನವರಾತ್ರಿಯ ಕೋಲ್ಮಿಂಚು

ಭಾವನೆ ಸಾಧ್‌ಚಿಡುವಕ್
ನೊಂಬಲ ಕೊಡ್‌ಕೊಂಡು ರೂಪ್‌ಚಿಡುವಕ್
ತಾಳ್ಮೆ ಬೋಂಡು ಮನಸ್ಸ್‌ಕ್
ಗುರಿ ಬೋಂಡು ಪಂಚೇಂದ್ರಿಯಕ್
ವರ್ಣನೆ ಬೋಂಡು ರೂಪಕ್
ರಾಗ ಬೋಂಡು ಆರಾಧನೆಕ್
ಗುಣ ಬೋಂಡು ತತ್ವಕ್
ಶಕ್ತಿ ಬೋಂಡು ಜೀವಕ್
ಮುಡಿಪಾಂಡು ಎಲ್ಲಾ ದೇವಡ ಇಚ್ಛೆಕ್

**ತಾತಂಡ ರಾಣಿ ಗಣೇಶ್**
**ಕುಕ್ಲೂರ್**

# ದಸರಾ ಸಂದೇಶ



ಫಲತರ ರಂಗ್‌ರ ಪಕ್ಷಿರ ರೂಪತ್
ತೇಲಿಯಂಡ್, ಪಾರಿಯಂಡ್ ಬಾತ್
ದಸರಾ ಮಡಿಕೇರಿಕ್ !

ಕಂಡಿರಾ ನಿಂಗ ?
ಪಳೆಯ ಬೇರ್‌ಕ್
ಪುದಿಯ ಚಿಗ್‌ರ್ ಕೊಂಬೆನ
ಕಸಿ ಮಾಡ್‌ನನೆಕೆ ಇಂಜದ್...!

ಪೂವ್ ದುಂಬ್‌ನ,
ಏದೋ ಮರತ್‌ರ
ತೊಪ್ಪುರ ಸುಳಿರೊಳಿಯ
ಪಾಡುವ ಕೋಗಿಲೆರನೆಕೆ
ಬಂದೆತ್‌ಚಿ ದಸರಾ
ಮಡಿಕೇರಿಕ್ ! ಅದಾ ನೋಟ್ !

ಬೆದ್‌ಕಾಂಜಿತ್ ಮಳೆಪೊಜ್ಜಕ
ಅದ್ ಭಾಮಿತಾಯಿಕ್ ತಂಪು
ಬೆದ್‌ರುರಿನ ಅರ್‌ಂಜಂವಂಗೇ ಗೊತ್ತ್,
ಮಳೆರ ಮಹತ್ವ !
ಸಮರಸವೇ ಜೀವನಾಂದೆಣ್ಣುವ ತತ್ವಕ್
ಈ ದಸರಾ ನಮ್ಮೆಯೇ ನೇರಾಯಿತೂ ಪವಿತ್ರ !

## ನವರಾತ್ರಿಯ ಕೋಲ್ಮಿಂಚು

ಬದ್‌ಕ್‌ಲ್...
ಮೊದ್‌ರ ಉಂಡ್, ಕೈಪೂ ಉಂಡ್
ನೊಂಬಲವೂ ಉಂಡ್, ತೆಳಿರ ತಂಪು ಕಾತೂ ಉಂಡ್
ಪ್ರೀತಿರ ಬದ್‌ಕ್‌ಲೇ ಚಾಯಿಯೂ ಕಾಂಬ !

ಆಹಾ ! ಎಂಥಾ ಸಮನ್ವಯತೆರ ಸಂದೇಶ
ಬದ್‌ಕ್‌ಕ್ ಬೊಳಿಕಾಟುವ ದಸರಾತ್‌ರ ವಿಶೇಷ !

ಐನಂಡ ಎಂ. ಧನು
ಬಿಳುಗುಂದ

# ಇತರ ಭಾಷಾ ವಿಭಾಗ

# [illegible]

# The Truth shall never change

Every single flower may die
And the sun forget to rise
Stars may fall from the sky
But the truth shall never change

A mother's love may change to hate
And everyman forsake his mate
Every saint may turn reprobate
But the truth shall never change

Every diamond may turn to dust
And gold change to worthless rust
Every wrong way may overcome just
But the truth shall never change

All the stars may cease to shine
And fail to form their ordained design
All wealth on earth may be mine
But the truth shall never change

Every craftsman may lose his skill
All the song birds may become still
Every stream may flow uphill
But the truth shall never change

The rocks may turn to clay
And night neglect to follow a day
Every plant may lose its way
But the truth shall never change

The truth shall never change
Even the earth and heaven crumble to dust
Truth is eternal it shall never change

**Prashanthi P. K.**

# ನಾಳೈಕ್ಕಾಗೋ ಕಾತಿರುಕ್ಕೊಂ



ಅಂಡ್ರಲ್ಲಿಂದ್ ಇಂಡ್ರವರ್ಯ
ಉಲಗತ್ತಿಲ್ ಎಂಗೆಂಗುಂ ಪಸಿ
ತುಣಿಕ್ಕಾಗೋ, ವೀಡ್ಕ್ಕಾಗೋ
ಪೋರಾಟಂ, ತಾಕ್ದಲ್ ನಡಕಿಂಡ್ರನ್
ಪುರಚ್ಚಿ ತಲೈವರ್‌ಗಳ್
ತೊಂಡರಗಳ್
ಅಮ್ಮೈಚ್ಚರ್‌ಗಳ್
ಮೇಡೆಯಿಲ್ ಪೇಸುಗಿಂಡ್ರಾರ್... ಪೇಸುಗಿಂಡ್ರಾರ್
ಪೇಚಿಲೇ ಎಚ್ಚಿ ಮುಟ್ಟುಂ ವಂಡ್ರದ್
ಪಸಿ, ವೀಡ್, ವೇಲೈ ಮನುಗಳ್
ಅಪ್ಪಡಿಯೇ ನಿಕ್ಕಿಂಡ್ರದ್
ಸಂದನ ತಿರುಡನ್ ವೀರಪ್ಪನ್ ಪೋಲೆ.
ತೊಂಡರ್ ಮೇಡೆಯಿನ್ ಪೇಚಿ ನಿಕ್ಕಾದ್
ಇಂಗ್ಯೆ ಪೋರಾಟಂ, ತಾಕ್ದಲ್ ನಿಕ್ಕಾದ್
ಎಂಡ್ರುಂ... ಎಪ್ಪೋದು
ಕಡ್ಯೆಕ್ಕುಂ ಎಂಗಳ್ ಮಕ್ಕಳ್‌ಕ್
ಒರ್ ನೇರಂ ವಯಿರ್ ನೆರಿಯಂ ಸೋರ್
ಒರ್ ಚಿನ್ನ ವೇಲೈ, ಒರ್ ವೀಡ್
ಆಮ ಆಮ ನಾಂಗಲ್
ವರುಂ ಅಂದ ಆಳಗಾನ ಎಂಗಳ್
ನಾಳೈಕ್ಕಾಗೋ ಕಾತಿರುಕ್ಕೊಂ...

ಟಿ. ಎಂ. ಚಂದ್ರಶೇಖರ
ವೀರಾಜಪೇಟೆ

# ಮಾಕೆ ಬಾದ್




ಓ ಮಾ,
ತೂ ಛೋಡ್‌ಗಯಿ ತೇರೆ ಬಚ್ಚೋಂಕೊ,
ತೂ ಬಿಛಡ್ಗಯಿ ತೇರೆ ಲಾಡ್ಲೋಂಸೆ,
ದಿಲ್ ಮೇ ಹಮಾರ ತೂ ಬಸ್ಗಯಿ,
ಝಿಂದಗೀ ತೂ ಬಸ್ಕರ್‌ಗಯಿ,
ಹಮಾರೆ ಆಂಸೂ ಬಹ್ತೇ ಹೈಂ
ಆಂಖ್ ಭೀಗೆಬಿನಾ.
ಫಿರ್‌ಬಿ ಘುಂ ಝಾಹಿರ್ ಹೈ ತೇರೇ ಬಿನಾ
ಕಹ್ತೇ ಹೈಂ ಜನ್ನತ್ ತೇರೇ ಕದ್ಮೋಕೆ ತಲೆಹೈ ,
ಓ ಮಾ, ತೂ ಹೀ ನ ರಹೀ
ತೊ ಜನ್ನತ್ಕೊ ಕಹಾಂಸೆ ಪಾಯೇ ಹಂ
ಅಗರ್ ಜನ್ನತ್ ಹಂಕೊ ಮಿಲ್ಗಯಿ,
ತೋಭಿ ಮಾಕೊ ಕಹಾಂಸೆ ಲಾಯೆ
ಓ ಮಾ, ಪಡ್ಗಯಾ ಖಾಲಿ ಹಮಾರಾ ಪ್ಹೋಂಸ್ಲಾ
ತೇರೆ ಜಾನೇಸೆ
ಉಡ್ಗಯಾ ಸಾಯಾ
ಹಂಖೇ ಸಹಾರೋಂಕ
ಓ ಮಾ, ಓ ಮಾ
ತೇರೇ ಡಾಂಟ್ನೇಕಿ ಆವಾಝ್,

ಪೀಟ್ನೇಕಿ ಜಲನ್,
ತೇರಾ ಖಿಲಾನಾ, ಪಿಲಾನಾ,
ಲೋರಿಕಾ ಸುನಾನಾ,
ನೀಂದ್ಕೊ ಬುಲಾನಾ,
ಚಾಂದ್ ಕಾ ದಿಖಾನಾ,
ಸಬ್ ಕುಚ್ ಯಾದ್ ಬನ್ಕೇ ರಹ್ಗಯಾ
ತೂ ಹಮಾರೆ ಹರ್ ಖುಷಿ
ಔರ್ ಘಂ ಕೆ ಮೌಕೇಪೆ
ಯಾದ್ ಆಯೇಗಿ
ಯಾದ್ ಬನ್ಕೆ ರಹ್ಜಾಯೇಗಿ.
ತೂ, ಯಾದ್ ಬನ್ಕೆ ರಹ್ಜಾಯೇಗಿ.

ವಹೀದ್‌ಜಾನ್
ಸುಂಟಿಕೊಪ್ಪ

# ಇದಿಕಲ...!
# ನಿಜಂ ಕಾನೇ ಕಾದು...!




ಮಾಘ ಮಾಸಂ ಚಲಿ ಮಂಟಲೋ ಮಡಿಕೇರಿಕೊಚ್ಚಾನು
ಅಖಿಲ ಭಾರತ ಕನ್ನಡ ಸಾಹಿತ್ಯ ಸಮಾಖ್ಯ ಭವ್ಯಾತಿ ಭವ್ಯಂಗಾ ಜರಿಗಿಂದಿ
ನೇನಪ್ಪುಡು ನಾಮಿತ್ರುಲತೋ ಕಲಿಸಿ-ಮೆಲಿಸಿ ಬಾಗಾ ತಿರಿಗಾನು,
ಊರಂತ ಸಂದಟಿ, ಪಂಡುಗ ರೂಪಂ ಲೋವುಂದಿ,
ಪಗಲಂತಾ ನಗರಂಲೋ ಊರೇಗಿಂಪು.
ಪಾತ ಸಮಾಖ್ಯ ಕವಿಕಿ, ಕೊತ್ತ ಸಮಾಖ್ಯ ಕವಿಕಿ ವೈಭವಂಗಾ
ಪೂರ್ಣ ಕುಂಭಾಲತೋ ಸ್ವಾಗತಂ ಪಲಿಕಾರ ಸಹಸ್ರಾದಿ ಜನಂ
ವೇದಿಕಲೆಕ್ಕಿ ಉಪನ್ಯಾಸಲು ಪಲಿಕಾರು.
ರಾತ್ರಿಂತಾ ಒಕ್ಕಟೇ ಕಲವರಿಂಪಲು, ನೇನೂ ಕವಿನಿ ಅಯ್ಯಿನಟ್ಟು,
ಸನ್ಮಾನಂ ಚೆಯ್ಯಿಂಚಿ ಕೊನ್ನಟ್ಟು, ಆ ತರ್ವಾತ ಅಭಿಮಾನುಲುಚೆ,
ಶುಭಾಕಾಂಕ್ಷಲಂದುರುನ್ನಟ್ಟು, ಪೂಲದಂಡಲತೋ, ಶಾಲುವಾಲತೋ,
ಮುಂಚೆತ್ತಿವೇಸಿನಟ್ಟು ನನ್ನು ಕಲವರ ಪೆಡುತುಂಟೆ
ನೇನೂ ಪ್ರಸಂಗಿಂಚಾನು ಮರಣಂ ನನುವರಿಂಚಿ ವಸ್ತೇ ನೇನೇ ಮಂಟಾನು ?
ಪಾಲುಪೆಟ್ಟಿ-ಜೋಲಪಾಡಿ ಪಡುಕೋ ಮಂಟಾನು
ಲಂಚಂ ನನು ಭಜಿಂಚ ವಸ್ತೇಏ ಮಂಟಾನು ?
ತಿರುಮಲಗಿರಿ ಹುಂಡಿಲೋ ಚೊರಬಡಮಂಟಾನು
ಕ್ರೋಧಂನನು ಕಪ್ಪಿಸ್ತುಂಟೇಏಮಂಟಾನು ?
ಪಸ ಸಚ್ಚಿನ ಪೇಡಿ ಜಾತಿಲೋ ಬುಸಲಿಡ ಮಂಟಾನು
ಲೋಭಂ ನನು ಗುಲಿಪಿಸ್ತುಂಟೇನೇಮಂಟಾನು ?
ತೆಗವಲಿಕೆ ಕವಿಪಲು ಕುಲ್ಲೋದಿಗ ಬಡಮಂಟಾನು

## ನವರಾತ್ರಿಯ ಕೋಲ್ಮಿಂಚು

ಅಹಂಕಾರಂ ಎದುರ್ಯೆ ವಸ್ತೆ ನೇನೇಮಂಟಾನು ?
ಸರಸ್ಸುವದಿಲಿ ಕೊಂಡನೆತ್ತಿಲೋ ಸ್ಥಿರಪಡಮಂಟಾನು
ಅಂಟೂ...ಎದೋ ಎದೋ ಪೆದ್ದ ಪೆದ್ದ ಮಾಟಲು,
ಅಂತಲೋನೇ ಪೂಲದಂಡಲತೋ ಮುಂಚೆತ್ತಿನ ನಾಮುಖಂ,
ಪೂಲಜಂಟಲೋಸುವಾಸನಂ ಕೊಚ್ಚಿನ ತುಮ್ಮೆದ ಕಾಟುಕಿಬಲಿ
ಭರಿಂಚಲೇನಿ ಬಾದತೋ ವದುಲು ಕುನ್ನಾನು ಪೂಲದಂಡ,ಕಾನಿ...
ವದುಲು ಕೋ ಲೇದು ಪಟ್ಟು ಶಾಲುವಾ, ಕಾನಿ...ಶರೀರಂ ಮೀದನುಂಚಿ
ಕದಲುತುಂದಿ, ಪಟ್ಟಿಂಪುತೋ ಗಟ್ಟಿಗಾಪಟ್ಟುಕುನ್ನಾನು
ತೀರಾ...ಮೇಲುಕೊನಿ ಚೂಶಾನು, ನಾಮಿತ್ರುಡೊಕಡು
ಬಲಂತೋಲಾಗುತುನ್ನಾಡು, ನಾ ಕಪ್ಪುಡಂನು
ಚಲಿಕಿ ತಟ್ಟುಕೋಲೇಕ, ದೋಮಲಿಕಿ ತಟ್ಟುಕೋಲೇಕ
ವಣುಕುತೂ,ವಣುಕುತೂ, ವಾಡೇದೋ ಕಲಕಂಟುನ್ನಾಡು
ನಾಲೋ ನೇನೆ ನವ್ವು ಕುನ್ನಾನು !
ಶಾಲುವಾ ಲೇದು, ಪೂಲುದಂಡಲೂ ಲೇವು
ತುಮ್ಮೆದಲೂ ಲೇವು, ನೇನಸಲು ಕವಿನೇ ಕಾನು,
ನೇನಸಲು ಕವಿನೇ ಕಾನು, ಆ ಕವಿ ಪಲುಕಲನ್ನೀ...
ನೋಟಿಬಾಟಲು... ಎಪ್ಪುಡೋ, ಎಕ್ಕಡೋವಿನ್ನಟ್ಟು
ಇದಿ ಕಲ...! ನಿಜಂ ಕಾನೇ ಕಾದು...!

ಸಬಲಂ ಭೋಜಣ್ಣಾ ರೆಡ್ಡಿ,
ಕುಶಾಲನಗರ

# ಮೃತ್ಯುಂಜಯ



ಮಾ ಕಾ ಕೇವಲ ಜನ್ಮ ಮಾತ್ರ, ಮರಣ ಚನಾ
ಅನೇಕ ರೂಪ, ಅನೇಕ ನಾವ, ಅನೇಕ ರಂಗ
ಮಾಗ್ಗೆಲೆ ಧಾನ್ಯಾಂತು ಮಸ್ತಜನ ಗುಂಗ...
ಗರಿಲಿಚಾಂಕ ಪಳ್ಯೋನು ಪಾಪ ಜಾತ್ತಾ
ಜಾತ್ಯಾಕ ಕೊರ್ಚೆ ಕೆತ್ತೆ? ಧನಿಕ ಯೋಯೋ ಮ್ಹಣ್ತಾಚಿ
ತಾನ್ನೀಚಿ ಮಾಗ್ಗೆಲೆ ಪಾಲಕ ಪೋಷಕು ರಕ್ಷಕು ಭಕ್ಷಕು
ಇತ್ಸಾಮ್ಹಳ್ಯಾರೆ ಧನಿಕಾನೀಚಿ ಮಾಕ್ಕಾ ಏಕಾವ್ಯೆವ್ಯಾನಿ ದೋನಿ
ದೋನಾ ವ್ಯೆವ್ಯಾನಚಾರಿ... ಚಾರದಾಕ್ಕೊನ ಆರಿ...ಅಳ್ಳೆ
ಬೀಜಾಸುರಾಸಾರಖೆ ರೂಪದಿತ್ತೇರ ಗೆಲೆ...
ಆಜಿ ಹಾಂವ ನಾತ್ತಿಲೆ ಗಾಂವ ನಾ... ಹಾಂವ ನಾತ್ತಿಲ್ಲೆ ನಾವ ನಾ
ಭಾವ ಭಾ ನಾ ಭೈಣಭಾನಾ... ಆಮ್ಮನಾ...ಬಾಪಾರ್ಸನಾ...
ಕೋಣ ಹೀನಾ... ಮಾಗ್ಗೆಲೆ ಸಂಗೀತಾಯ ಕರ್ತಾಚ
ಸಕ್ಕಡ ಥಕ್ಕ ಥ್ಯೆ...ಮ್ಹಣ್ತಾಚಿ ಒಟ್ಟು ವೈ... ವೈ...
ಕಾಮಬಂಚೆಗೀ ಆಸ್ಬೋ...ಆಸ್ಲ್ಯಾರಿ ಮಾಗ್ಗೆಲೆ ವರದಹಸ್ತ
ಜಾತ್ತತೇ ಕಾಮಭಾಹೀಸಸ್ತ ಆನಿಮಸ್ತ...ಜಾತ್ಯಾರಿ
ಸಕ್ಕಡಾಂಕ ಹಾಂವ ಮೆಳಚೆ ಸುಲಭನ್ಹಯ...
ಗಾಯ ಕಾಳೀ ಜಾನ್ಸಾರಿ ತಾಗ್ಗೊಲೆ ದೂಧ ಕಾಳವೇ ?
ದುಸ್ಕ್ಯಾಂಕ ಹಾಂವ ಗೊರೀ ಜಾವ್ನು ದಿಸ್ಲ್ಯಾರಿ...
ಧನೀಕ ಮಾಗ್ಗೆತಿ ಕಾಳೆ ಬಣ್ಣಂತೂಚಿ ಆನಂದ ಪಾವುತಾ...
ಮ್ಹಣ್ಣಾಕಾಚಿ ಮಾಕಾ ಕುರೂಪ ಮಾಗ್ಗವಿ ರೂಪ ಚಂದಸುರೂಪ
ಕಳ್ಳೀವೇ ಹಾಂವ ಕೋಣ ಮ್ಹೋಣು?

ಛಿಹ್ ಮ್ಹಾಮ್ಹಾ ಕಿತ್ತ್ಯಾಕ್ ಬಾಜೈತಾ ಮಾತ್ತೆ
ಕವಳ ಬೋಳ ಮಾತ್ಯವೈಲೆ ಸಾತ್ತೆ... ಹ್ಹಾಂವ... ಹಾಂವ... ಹಾಂವ
ಕೋಣಾ... ಕಳ್ಳೈವೇ... ದ್ವಾಪಕಾಂತು ಕೃಷ್ಣಾವತಾರ... ರಾಮಾಯಣಾಂತು
ರಾಮಾವತಾರ... ಬುದ್ಧ... ಪರಶುರಾಮ... ಕೂರ್ಮ... ವರಾಹ
ದಶಾವತಾರಾಂಡು ಮಿಸ್ಲೋನು ಕಲಿಯುಗಾಂತ ಜನ್ಮ
ಪೇತತಾ ಮ್ಹಣ್ಣಾಚಿ
ಮಾಕ್ಕಾ 'ಲಂಚಾವತಾರು'... ಹೋಮಾಗ್ಗೆಲೋ ಅಕ್ರಾವೇ ಅವತಾರು ಸಾಂಗಾಚಿ
ಜೈ ಜೈ 'ಲಂಚಾವತಾರು'... ಜೈ ಜೈ ಲಂಚಾವತಾರು

ಡಾ. ಚೇತನಕುಮಾರ್ ನಾಯಕ್
ಮಡಿಕೇರಿ

**ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯಲ್ಲಿ ಮಾರಾಟಕ್ಕೆ ಲಭ್ಯವಿರುವ ಕೊಡವ ಭಾಷಾ ಪುಸ್ತಕಗಳು**

| | | |
|---|---|---|
| 1 | ಅಪ್ಪಚ್ಚ ಕವಿರ ನಾಲ್ ನಾಟಕ | ಉ. 50.00 |
| 2 | ಕಥೆ ಕೊಂಬ್ | ಉ. 10.00 |
| 3 | ತೇಂದುಳಿ | ಉ. 10.00 |
| 4 | ಮನೆಲೋರ್ ಮದ್ದ್ | ಉ. 10.00 |
| 5 | ಆನೆಬೆಪ್ಪುನಾಡ್ | ಉ. 12.00 |
| 6 | ಚಿಗ್‌ರ್ | ಉ. 5.00 |
| 7 | ಬಾಳ್‌ಕ್ ಬೊಳಿ | ಉ. 10.00 |
| 8 | ಕೊಡವ ಚಂದೂಕ | ಉ. 30.00 |
| 9 | ಪೂವ್ ಮುಳ್ಳ್ | ಉ. 20.00 |
| 10 | ಚೋಮ | ಉ. 10.00 |
| 11 | ಕಾಮವ್ವಂಡ ಕವನ | ಉ. 5.00 |
| 12 | ಮಂಜಿನೊಳಗಿನ ಮಾತು | ಉ. 10.00 |

*Printed at Poomaale Printers, Virajpet. Ph : 56360*